ಮಾನ್ಯ ಅಧ್ಯಕ್ಷರು, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯ ಯೋಜನಾ ಪ್ರಾಧಿಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:27.10.2021ರಂದು ಪೂರ್ವಾಹ್ನ 11.30 ಘಂಟೆಗೆ ನಡೆದ ಪ್ರಾಧಿಕಾರದ 70ನೇ ಸಾಮಾನ್ಯ ಸಭೆಯ ನಡವಳಿ

ಕ್ರಮ ಸಂಖ್ಯೆ	ಹಾಜರಿದ್ದ ಸದಸ್ಯರು	
1	ಮಾನ್ಯ ಅಧ್ಯಕ್ಷರು, ಬಿಎಂಐಸಿಎಪಿಎ	ಅಧ್ಯಕ್ಷರು
2	ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.	ಸದಸ್ಯರು
3	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿಎಂಐಸಿಎಪಿಎ. ಬೆಂಗಳೂರು.	ಸದಸ್ಯ ಕಾರ್ಯದರ್ಶಿಗಳು
	ಸದಸ್ಯರ ಪರವಾಗಿ ಹಾಜರಿದ್ದ ಅಧಿಕಾರಿಗಳು	
4	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು	ಸದಸ್ಯರು
5	ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ಸದಸ್ಯರು
6	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ಬೆಂಗಳೂರು	ಸದಸ್ಯರು
	ಹಾಜರಿದ್ದ ವಿಶೇಷ ಆಹ್ವಾನಿತರು	
7	ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.	
8	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.	
9	ಸಮನ್ವಯ ಅಧಿಕಾರಿಗಳು, ಬಿಎಂಐಸಿಪಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	
	ಗೈರು ಹಾಜರಾದ ಸದಸ್ಯರು	
10	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.	ಸದಸ್ಯರು
11	ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
12	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು	
13	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ಜಿಲ್ಲೆ, ರಾಮನಗರ	ಸದಸ್ಯರು
14	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ	ಸದಸ್ಯರು
15	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು	ಸದಸ್ಯರು
16	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು	
17	ರಾಮನಗರ ಮುನಿಸಿಪಲ್ ಕಮಿಷನರ್, ರಾಮನಗರ, ರಾಮನಗರ ಜಿಲ್ಲೆ	ಸದಸ್ಯರು
	ಗೈರು ಹಾಜರಾದ ವಿಶೇಷ ಆಹ್ವಾನಿತರು	
18	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ	
19	ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	

1) ದಿನಾಂಕ:08.07.2021ರಂದು ನಡೆದ ಪ್ರಾಧಿಕಾರದ 69ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು.

*****

ದಿನಾಂಕ:08.07.2021ರಂದು ನಡೆದ ಪ್ರಾಧಿಕಾರದ 69ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಕುರಿತು.

ತೀರ್ಮಾನ:

ದಿನಾಂಕ:08.07.2021ರಂದು ನಡೆದ ಪ್ರಾಧಿಕಾರದ 69ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದೃಢೀಕರಿಸಲಾಯಿತು.

2) ದಿನಾಂಕ: 08.07.2021ರಂದು ನಡೆದ ಪ್ರಾಧಿಕಾರದ 69ನೇ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮದ ಸಂಬಂಧ ಪಾಲನಾ ವರದಿ.

*****

ದಿನಾಂಕ: 08.07.2021ರಂದು ನಡೆದ ಪ್ರಾಧಿಕಾರದ 69ನೇ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮಗಳ ಕುರಿತು ಪಾಲನಾ ವರದಿಯನ್ನು ಈ ಕೆಳಕಂಡಂತೆ ಮಂಡಿಸಿದೆ.

ವಿಷಯ ಸಂಖ್ಯೆ	ವಿಷಯ	ತೆಗೆದುಕೊಂಡ ಕ್ರಮ
II	**ತಾಂತ್ರಿಕ ಶಾಖೆ**	
III	**ವಿನ್ಯಾಸ ಅನುಮೋದನೆ ಪ್ರಕರಣಗಳು**	
1	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:47/1ರ 0ಎ–20ಗು, 47/2ರ 0ಎ–09ಗು, 47/5ರ 0ಎ–18ಗು, 47/6ರ 0ಎ–16ಗು, 47/7ರ 0ಎ–17ಗು, 47/8ರ 0ಎ–15ಗು, 47/9ರ 0ಎ–09ಗು, 47/10ರ 0ಎ–20ಗು, 52/2ರ 01ಎ–03ಗು, 52/3ರ 0ಎ–28ಗು, 52/4ರ 0ಎ–29ಗು, 52/5ರ 0ಎ–37ಗು, 52/6ರ 0ಎ–07ಗು, 52/7ರ 0ಎ–23ಗು, 53/2ರ ಪೈಕಿ 0ಎ–36ಗು, 53/3ರ ಪೈಕಿ 01ಎ–14ಗು, 53/4ರ ಪೈಕಿ 01ಎ–20ಗು, 54/2ಬಿರ 0ಎ–27ಗು, 54/3ರ 01ಎ–24ಗು, 54/4ರ 04ಎ–22ಗು, 59/1ರ 02ಎ–01ಗು, 60/4ರ 0ಎ–09ಗು, 60/5ರ 0ಎ–08ಗು, 60/7ಎರ 02ಎ–11ಗು, 60/7ಬಿರ 0ಎ–09ಗು, 60/7ಸಿರ 0ಎ–35ಗು, 60/9ರ ಪೈಕಿ 0ಎ–21ಗು, 60/10ರ 01ಎ–12ಗು, 60/11ರ 0ಎ–25ಗು, 60/12ರ 0ಎ–35ಗು, 60/13ರ 0ಎ–10ಗು, 60/16ರ 0ಎ–16ಗು, 60/17ರ 0ಎ–10ಗು, 60/18ರ 0ಎ–04ಗು, 60/19ರ 0ಎ–07ಗು ಮತ್ತು 60/20ರ 0ಎ–10ಗು ಒಟ್ಟು 28ಎ–17ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಮೆ॥ ಸಮೃದ್ಧಿ ಡೆವಲಪರ್ಸ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:52/1ರ 03ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಸಮೃದ್ಧಿ ಡೆವಲಪರ್ಸ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆ.ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:6/1ರ 05ಎ–15ಗು ವಿಸ್ತೀರ್ಣದ ಜಮೀನಿಗೆ ವಿನ್ಯಾಸ ಅನುಮೋದನೆ ನೀಡುವ ಸಂಬಂಧ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

4	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 28/1ರ 02ಎ–07ಗು ಮತ್ತು 28/3ರ 02ಎ–07ಗು ಒಟ್ಟು 04ಎ–14ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ. ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ ಮತ್ತು ಶ್ರೀ ಐವಾಲಗಯ್ಯ ರವರ ಜಿಪಿಎ ದಾರರದಾದ ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ. ಇದರ ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ ಇವರು ಕೋರಿರುವ ಬಗ್ಗೆ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
5	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/8ರ 0ಎ–20ಗು, 31/2ರ 0ಎ–15ಗು, 31/5ರ 0ಎ–15ಗು, 31/6ರ 02ಎ–10ಗು ಮತ್ತು ಸರ್ವೆ ಸಂಖ್ಯೆ:31/7ರ 0ಎ–30ಗು ಒಟ್ಟು 04ಎ–10ಗು ಜಮೀನಿಗೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಅಹದ್ ಬಿಲ್ಡರ್ಸ್ ಪ್ರೈ.ಲಿ., ರವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
6	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 56/2ರ 01ಎ–00ಗು, 57/6ರ 01ಎ–10ಗು, 57/7ರ 02ಎ–32ಗು ಮತ್ತು 57/16ರ 01ಎ–00ಗು ಒಟ್ಟು 06ಎಕರೆ–02ಗುಂಟೆ ಜಮೀನಿಗೆ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಅಹದ್ ಬಿಲ್ಡರ್ಸ್ ಪ್ರೈ.ಲಿ., ರವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
IV	**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳು**	
1	ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಗಂಗಸಂದ್ರ ಗ್ರಾಮದ 55(ಹಳೆ ಸರ್ವೆ ಸಂಖ್ಯೆ:36)ರಲ್ಲಿ 02ಎ–08ಗು, ಹೊಸ ಸರ್ವೆ ಸಂಖ್ಯೆ:53(36)ರಲ್ಲಿ 01ಎ–18ಗು, ಸರ್ವೆ ಸಂಖ್ಯೆ:36ರಲ್ಲಿ 02ಎ–37ಗು, ಸರ್ವೆ ಸಂಖ್ಯೆ:51ರಲ್ಲಿ 0ಎ–27ಗು, ಸರ್ವೆ ಸಂಖ್ಯೆ:37ರಲ್ಲಿ 33ಎ–37ಗು, ಸರ್ವೆ ಸಂಖ್ಯೆ:57(36)ರಲ್ಲಿ 02ಎ–02ಗು, ಸರ್ವೆ ಸಂಖ್ಯೆ:47ರಲ್ಲಿ 02ಎ–38ಗು, ಸರ್ವೆ ಸಂಖ್ಯೆ:45(34)ರಲ್ಲಿ 0ಎ–34ಗು, ಸರ್ವೆ ಸಂಖ್ಯೆ:46(34)ರಲ್ಲಿ 0ಎ–28ಗು, ಸರ್ವೆ ಸಂಖ್ಯೆ:44(34)ರಲ್ಲಿ 0ಎ–17ಗು, ಸರ್ವೆ ಸಂಖ್ಯೆ:48(34)ರಲ್ಲಿ 0ಎ–27ಗು ಒಟ್ಟು 48ಎ–33ಗು ಜಮೀನನ್ನು ವಸತಿ ವಲಯದಿಂದ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ (ಶೈಕ್ಷಣಿಕ) ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ರವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 410/4ರ 01ಎ–11ಗು, 410/5ರ 0ಎ–25½ಗು ಮತ್ತು ಸರ್ವೆ ಸಂಖ್ಯೆ:410/6ರ 01ಎ–11½ಗು ಒಟ್ಟು 03ಎ–08ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎಸ್.ಎಂ. ನಾಗನರಸಿಂಹೇಗೌಡ, ಶ್ರೀ ಸಿ.ಹೆಚ್.ಹೊಯ್ಸಳರಾಜ್ ಅರಸ್ ಮತ್ತು ಶ್ರೀ ಶಿವಲಿಂಗ ಇವರುಗಳು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 359/2ರ 01ಎ–07ಗು, 359/6ರ 01ಎ–05ಗು ಮತ್ತು ಸರ್ವೆ	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

	ಸಂಖ್ಯೆ:359/7ರ 01ಎ–05ಗು ಒಟ್ಟು 03ಎ–17ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಆರ್.ಅಶ್ವಿನ್ ಕುಮಾರ್, ಆರ್.ರೇವತಿ ಮತ್ತು ಶ್ರೀ ಆರ್.ಪ್ರದೀಪ್ ಕುಮಾರ್ ರವರ ಪರವಾಗಿ ಜಿ.ಪಿ.ಎ ದಾರರಾದ ಶ್ರೀ ಪಿ.ಹೆಚ್ ರಾಮೇಗೌಡ ಬಿನ್ ಲೇ. ಹುನುಮೇಗೌಡ ರವರು ಸಲ್ಲಿಸಿರುವ ಮನವಿ ಕುರಿತು	
4	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 325/2ರ 0ಎ–03½ಗು, 325/10ರ 01ಎ–25½ಗು, 325/11ರ 0ಎ–10½ಗು, 325/12ರ 0ಎ–16½ಗು ಮತ್ತು ಸರ್ವೆ ಸಂಖ್ಯೆ:325/13ರ 0ಎ–24ಗು ಒಟ್ಟು 03ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಕುಮಾರ್ ಬಿನ್ ಲೇಟ್ ಅಪ್ಪಾಜಿ ರವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
5	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:28/2ರಲ್ಲಿ 02ಎ–03ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ನರಸಿಂಹಯ್ಯ ಮತ್ತು ಶ್ರೀಮತಿ ಚನ್ನಮ್ಮ ಇವರುಗಳ ಜಿಪಿಎದಾರರಾದ ಶ್ರೀ ಕೆ.ಎನ್.ಬೋರೇಗೌಡ ರವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
6	ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಸುಣ್ಣಘಟ್ಟ ಗ್ರಾಮದ ಸರ್ವೆ ಸಂಖ್ಯೆ:137/4ಎರ 0ಎ–20ಗು, 137/4ಬಿ1ರ 0ಎ–32ಗು, 195/2ರ 0ಎ–35ಗು, 196ರ 01ಎ–02ಗು, 197ರ 01ಎ–08ಗು ಮತ್ತು ಸರ್ವೆ ಸಂಖ್ಯೆ:198ರ 01ಎ–08ಗು ಒಟ್ಟು 05ಎ–25ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಕೃಷಿ ಉತ್ಪನ್ನಗಳ ಉಗ್ರಾಣ/ ವೇರ್ ಹೌಸ್ ಮತ್ತು ಶೀತಲೀಕರಣ ಕೇಂದ್ರ, ಕಲ್ಯಾಣ ಮಂಟಪ, ಆರೋಗ್ಯ ಕೇಂದ್ರ/ ಮೆಡಿಕಲ್ ಕ್ಲಿನಿಕ್, ಶೈಕ್ಷಣಿಕ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಡಾ॥ ಹೆಚ್.ಎಂ.ವೆಂಕಟಪ್ಪ ಬಿನ್ ಲೇಟ್ ಮಂಚೇಗೌಡ,ಕಣ್ವ ಫೌಂಡೇಶನ್ ರವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
V	**ಇತರೆ ವಿಷಯಗಳು**	
1	ವಿಶೇಷ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ರಾಮನಗರ ರವರಿಗೆ ಅಭಿಪ್ರಾಯ ನೀಡಿರುವುದರ ಬಗ್ಗೆ ಸ್ಥಿರೀಕರಣಕ್ಕಾಗಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಶಿಡ್ಲಕಲ್ಲು ಗ್ರಾಮದ ಸರ್ವೆ ಸಂಖ್ಯೆ:49ರ 03ಎ–37ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ (Service Industries) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ಸುಜಾದ್ ಪಾಷ ಇವರು ಸಲ್ಲಿಸಿರುವ ಆನ್‌ಲೈನ್ ಮನವಿಗೆ ಸಂಬಂಧಿಸಿದಂತೆ ನೀಡಿರುವ ಅಭಿಪ್ರಾಯವನ್ನು ಸ್ಥಿರೀಕರಿಸುವ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧ್ಯಾದೇಶ 2021 ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2021 ಅನ್ನು ಪ್ರಾಧಿಕಾರದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

VI	ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು	
1	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 126/1ರ 01ಎ–18ಗು, 126/3ರ 0ಎ–20ಗು, 126/4ರ 01ಎ–17ಗು, 126/5ರ 0ಎ–14ಗು, 128/2ರ 04ಎ–22ಗು, 131/1ರ 01ಎ–18ಗು ಪೈಕಿ 01ಎಕರೆ ಮತ್ತು ಸರ್ವೆ ಸಂಖ್ಯೆ:131/1ರ 0ಎ–13ಗು ಒಟ್ಟು 09ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಹಾಗೂ ಸರ್ವೆ ಸಂಖ್ಯೆ:131/1ರ 01ಎ–18ಗು ಪೈಕಿ 0ಎ–18ಗು ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಕೆ.ಆರ್ ದೇವಿ ಸುಲೋಚನಾ ॥ಉ॥ ಕೆ.ಆರ್.ಉಷಾ ರವರ ಪರವಾಗಿ ಜಿಪಿಎ ದಾರರಾದ ಶ್ರೀ ಪ್ರದೀಪ್ ಕೃಷ್ಣಪ್ಪ ಮತ್ತು ಶ್ರೀ ಜಿ.ಆರ್.ಭೈರೇಶ್ ಬಿನ್ ರಾಮಪ್ಪ ಶ್ರೀ ಭೈರೇಶ್.ಜಿ.ಆರ್ ಬಿನ್ ರಾಮಪ್ಪ ರವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:116ರ 04ಎ–39ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಭೈರೇಶ್.ಜಿ.ಆರ್ ಬಿನ್ ರಾಮಪ್ಪ ರವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 19/3ರ 0ಎ–20ಗು, 19/4ರ 0ಎ–15ಗು, 19/5ರ 0ಎ–17ಗು, 19/6ರ 0ಎ–37ಗು, 19/7ರ 0ಎ–10ಗು, 19/8ರ 0ಎ–10ಗು, 19/9ರ 0ಎ–18ಗು, 19/10ರ 0ಎ–07ಗು, 19/11ರ 0ಎ–30ಗು, 19/12ರ 0ಎ–29ಗು, 19/13ರ 0ಎ–29ಗು, 19/14ರ 05ಎ–13ಗು, 19/15ರ 0ಎ–20ಗು, 19/16ರ 0ಎ–37ಗು, 19/19ರ 02ಎ–04ಗು, 20/1ರ 0ಎ–22ಗು, 20/2ರ 0ಎ–15ಗು, 20/3ರ 0ಎ–09ಗು, 21/1ರ 0ಎ–04ಗು, 21/2ರ 0ಎ–19ಗು ಒಟ್ಟು 16ಎ–05ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ಎ.ಮುನಿರಾಜಪ್ಪ ಇವರು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
4	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:16ರ 04ಎ–20ಗು, 17/2ರ 02ಎ–17ಗು, 86/1ಎರ 0ಎ–16ಗು, 86/1ಬಿರ 02ಎ–24ಗು, 86/2ರ 02ಎ–31ಗು, 87/1ರ 04ಎ–21ಗು ಮತ್ತು ಸರ್ವೆ ಸಂಖ್ಯೆ:87/2ರ 0ಎ–31ಗು ಒಟ್ಟು 18ಎಕರೆ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಎಸ್.ಎಲ್.ವಿ ಕಾರ್ಪ್ ರವರ ಪಾಲುದಾರರಾದ ಶ್ರೀ ಆರ್.ಕಿಶೋರ್ ಕುಮಾರ್ ಮತ್ತು ಶ್ರೀಮತಿ ಲಕ್ಷ್ಮಿ ಕೃಷ್ಣಮಣಿ ಇವರುಗಳು ಸಲ್ಲಿಸಿರುವ ಮನವಿ ಕುರಿತು	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

ತೀರ್ಮಾನ:

ಪ್ರಾಧಿಕಾರದ 69ನೇ ಸಭೆಯ ನಿರ್ಣಯದಂತೆ ಕಛೇರಿಯಿಂದ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.

I ಆಡಳಿತ ಶಾಖೆ ಪ್ರಸ್ತಾವನೆಗಳು

1) ಬಿಎಂಐಸಿ ಯೋಜನಾ ಪ್ರಾಧಿಕಾರದ 2021ನೇ ಜುಲೈ ನಿಂದ ಸೆಪ್ಟಂಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಪರಿಶೀಲನೆ ಬಗ್ಗೆ.

*****

ಪ್ರಾಧಿಕಾರದ 2021ನೇ ಜುಲೈ ನಿಂದ ಸೆಪ್ಟಂಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಮಾಹಿತಿಯನ್ನು (ಅನುಬಂಧ–1)ರಲ್ಲಿ ಇರಿಸಿ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

ತೀರ್ಮಾನ:–

ಪ್ರಾಧಿಕಾರದ 2021ನೇ ಜುಲೈ ನಿಂದ ಸೆಪ್ಟಂಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ವಿವರಗಳನ್ನು (ಅನುಬಂಧ–1)ರನ್ವಯ ಸಭೆಯಲ್ಲಿ ಪರಿಶೀಲಿಸಿ ಅಂಗೀಕರಿಸಲಾಯಿತು.

2) ಪ್ರಾಧಿಕಾರದ ಹೊರಗುತ್ತಿಗೆ ಆಧಾರದ ಮೂಲಕ ಮಾನವ ಸಂಪನ್ಮೂಲ ಸೇವೆಗಳನ್ನು ಮುಂದುರವರೆಸುವ ಮತ್ತು ಪರಿಷ್ಕೃತ ದರಪಟ್ಟಿಯಂತೆ ಮಾಸಿಕ ಸಂಭಾವನೆಯನ್ನು ನಿಗಧಿಪಡಿಸುವ ಬಗ್ಗೆ.

*****

ಪ್ರಾಧಿಕಾರಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ : 46 : ನಯೋಸೇ : 2013, ಬೆಂಗಳೂರು ದಿನಾಂಕ: 19.02.2013ರಲ್ಲಿ ಮಂಜೂರಾಗಿರುವ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆದುರಾಗಿ ಪ್ರಥಮ ದರ್ಜೆ ಸಹಾಯಕರು, ಲೆಕ್ಕ ಸಹಾಯಕರು, ಬೆರಳಚ್ಚುಗಾರರು, ಶೀಘ್ರಲಿಪಿಗಾರರು, ವಾಹನ ಚಾಲಕರು, 'ಡಿ' ಗ್ರೂಪ್ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಮಂಜೂರಾತಿ ನೀಡಲಾಗಿತ್ತು.

ಸದರಿ ವಿಷಯದ ಕುರಿತು ದಿನಾಂಕ:08.07.2019ರ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾದಂತೆ ಪ್ರಾಧಿಕಾರಕ್ಕೆ ಕೆಟಿಪಿಪಿ ಕಾಯ್ದೆ 1999ರ ಅವಕಾಶಗಳನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕ್ರಮವಹಿಸಲು ಪ್ರಾಧಿಕಾರಗಳನ್ನು ಸರ್ಕಾರದಿಂದ ಅಧಿಸೂಚಿಸಿರುವುದರಿಂದ, ಇನ್ನು ಮುಂದೆ ಖರೀದಿಗಳು ಹಾಗೂ ಸೇವೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಪಡೆಯಲು ಕ್ರಮವಹಿಸುವಂತೆ ಸದಸ್ಯ–ಕಾರ್ಯದರ್ಶಿಗಳಿಗೆ ಸೂಚಿಸಲಾಗಿರುತ್ತದೆ.

ಅದರಂತೆ, ದಿನಾಂಕ: 07.09.2020ರ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಕ್ರಮವಹಿಸಲು ಹೊಸದಾಗಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುವುದರಿಂದ ಹೆಚ್ಚಿನ ಕಾಲಾವಕಾಶದ ಅವಶ್ಯಕತೆಯಿರುವ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ : 860 : ವೆಚ್ಚ : 12/17, ದಿನಾಂಕ: 02.08.2017ರಲ್ಲಿ ಸರ್ಕಾರದ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮ ಮತ್ತು ಮಂಡಳಿಗಳಿಗೆ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ॥ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (KEONICS) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುವ ಸಂಸ್ಥೆಯ ವತಿಯಿಂದ ಸೇವೆಗಳನ್ನು ದಿನಾಂಕ:16.08.2019 ರಿಂದ 15.08.2020ರವರೆಗಿನ ಅವಧಿಗೆ ಪಡೆಯಲಾದ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಹಾಗೂ ಸದರಿಯವರಿಗೆ ಪಾವತಿಸಿರುವ ಮೊತ್ತವನ್ನು ಸಭೆಯಲ್ಲಿ ಸ್ಥಿರೀಕರಿಸಲಾಯಿತು ಹಾಗೂ ಸಭೆಯು ಪ್ರಸ್ತುತ ಸಂಸ್ಥೆಯ ವತಿಯಿಂದಲೇ ದಿನಾಂಕ: 16.08.2020ರಿಂದ ಮುಂದಿನ ಒಂದು ವರ್ಷದ ಅವಧಿಗೆ 2019–20ನೇ ಸಾಲಿನಲ್ಲಿ ನೀಡಲಾದ ದರಪಟ್ಟಿಯಂತೆಯೇ ಮಾಸಿಕ ಸಂಭಾವನೆಯನ್ನು ಸಹ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಭೆಯ ತೀರ್ಮಾನದಂತೆ, ದಿನಾಂಕ: 16.08.2020 ರಿಂದ 15.08.2021 ರವರಿಗೆ ಮೆ॥ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗ ನಿಯಮಿತ (Keonics) ರವರಿಂದ ಸೇವೆಯನ್ನು ಪಡೆಯಲಾಗಿದ್ದು, ಸದರಿ ಅವಧಿಯು ದಿನಾಂಕ: 15.08.2021ಕ್ಕೆ ಮುಕ್ತಾಯಗೊಳ್ಳುತ್ತದೆ.

ಆದ್ದರಿಂದ ಸದರಿ ಸೇವೆಯನ್ನು ದಿನಾಂಕ:16.08.2021ರಿಂದ ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸುವ ಮತ್ತು ಪರಿಷ್ಕೃತ ದರಪಟ್ಟಿಯಂತೆ ಮಾಸಿಕ ಸಂಭಾವನೆಯನ್ನು ಸಿಬ್ಬಂದಿಗಳಿಗೆ ನಿಗಧಿಪಡಿಸುವ ಸಂಬಂಧ ವಿಷಯವನ್ನು ಸಭೆಯ ಮುಂದೆ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಮೆ॥ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗ ನಿಯಮಿತ (Keonics) ರವರಿಂದ ಮಾನವ ಸಂಪನ್ಮೂಲ ಸೇವೆಗಳನ್ನು ಪಡೆಯುತ್ತಿದ್ದು, ಸದರಿ ಸೇವೆಯನ್ನು ದಿನಾಂಕ:16.08.2021ರಿಂದ ಮುಂದಿನ ಒಂದು ವರ್ಷದ ಅವಧಿಗೆ ಮುಂದುರವರೆಸಲು ಹಾಗೂ ಪರಿಷ್ಕೃತ ದರಪಟ್ಟಿಯಂತೆ ಮಾಸಿಕ ಸಂಭಾವನೆಯನ್ನು ಸಿಬ್ಬಂದಿಗಳಿಗೆ ನಿಯಮಾನುಸಾರ ಈ ಕೆಳಕಂಡಂತೆ ನಿಗಧಿಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ದರಪಟ್ಟಿಯ ವಿವರಗಳು

ಕ್ರ.ಸಂ.	*ಹುದ್ದೆಯ ವಿವರ*	*ಪ್ರಸ್ತುತ ದರ (PF Servicing Tax)*	*ಪರಿಷ್ಕರಿಸಲಾದ ದರ (PF Servicing Tax) 10%*
1	*ಲೆಕ್ಕ ಸಹಾಯಕರು*	*28229*	*31052*
2	*ಪ್ರಥಮ ದರ್ಜೆ ಸಹಾಯಕರು*	*28229*	*31052*
3	*ಆಪ್ತ ಸಹಾಯಕರು*	*24881*	*27369*
4	*ಬೆರಳಚ್ಚುಗಾರರು*	*24881*	*27369*
5	*ವಾಹನ ಚಾಲಕರು*	*23713*	*26084*
6	*ಡಿ-ಗ್ರೂಪ್*	*20874*	*22961*

3) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನಲ್ಲಿ ಪ್ರಾಧಿಕಾರವು ತೆರೆದಿರುವ ಉಳಿತಾಯ ಖಾತೆಯನ್ನು ಪ್ಲೆಕ್ಸಿ ಖಾತೆಗಳಾಗಿ ಮಾರ್ಪಡಿಸುವ ಬಗ್ಗೆ.

*****

ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದಲ್ಲಿ ಲಭ್ಯವಿರುವ ಹಣವನ್ನು ನಿಶ್ಚಿತ ಠೇವಣಿ ಮಾಡುವ ಸಂಬಂಧ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅನೇಕ ಬಾರಿ ಟೆಂಡರ್ ಕರೆದಿದ್ದರು ಸಹ ಯಾವ ಬ್ಯಾಂಕ್‌ಗಳು ಸಹ ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ ಹಾಗೂ 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಪ್ರಾಧಿಕಾರವು ಉಳಿತಾಯ ಬ್ಯಾಂಕ್ ಖಾತೆಗಳನ್ನು ಪ್ಲೆಕ್ಸಿ ಖಾತೆಗಳಾಗಿ ಮಾರ್ಪಡಿಸಿಕೊಳ್ಳಲು ಬ್ಯಾಂಕ್‌ನೊಂದಿಗೆ ವ್ಯವಹರಿಸುವುದು ಸೂಕ್ತವಾಗಿದೆ. ಇದರಿಂದ ಅಗತ್ಯ ಮೊತಕ್ಕಿಂತ ಹೆಚ್ಚುವರಿ ಮೊತ್ತವನ್ನು Swipin and Swipout ಮೂಲಕ ನಿಶ್ಚಿತ ಠೇವಣಿಯಾಗಿ ಕಾಲಕಾಲಕ್ಕೆ ಪರಿವರ್ತಿಸಿದ್ದಲ್ಲಿ ಸಂಸ್ಥೆಗೆ ಹೆಚ್ಚು ಲಾಭವಾಗಲಿದೆ. ಅದರಂತೆ ಕ್ರಮವಹಿಸುವುದು ಸೂಕ್ತವಾಗಿರುತ್ತದೆಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಿಸಲಾಗಿದೆ. ಅದರಂತೆ ಪ್ರಸ್ತುತ ವಿಷಯವನ್ನು ಸಭೆಯ ಮುಂದೆ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಪ್ರಾಧಿಕಾರದಲ್ಲಿ ಲಭ್ಯವಿರುವ ಹಣವನ್ನು ನಿಶ್ಚಿತ ಠೇವಣಿ ಇಡಲು ಇ-ಪ್ರೆಕ್ಯೂರ್‌ಮೆಂಟ್ ಮುಖಾಂತರ ಮೊತ್ತೊಮ್ಮೆ ಟೆಂಡರ್ ಕರೆದು ಅದರಲ್ಲಿ ಯಾವುದೇ ಬ್ಯಾಂಕುಗಳು ಭಾಗವಹಿಸದೇ ಇದ್ದರೆ ಲೆಕ್ಕ ತನಿಖೆಯಲ್ಲಿನ ವರದಿಯ ಅಭಿಪ್ರಾಯದಂತೆ, ಪ್ಲೆಕ್ಸಿ ಖಾತೆಗಳನ್ನು ತೆರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) ಬಿಎಂಐಸಿಎಪಿಎ ಯೋಜನಾ ಪ್ರಾಧಿಕಾರದ 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ (ಅನುಬಂಧ–2).

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಿಎಂಐಸಿಎಪಿಎ ಪ್ರಾಧಿಕಾರದ 2020–21ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ದಿನಾಂಕ: 15.04.2021 ರಿಂದ 21.04.2021ರವರೆಗೆ ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯಿಂದ ಕೈಗೊಂಡಿದ್ದು, ಈ ಸಂಬಂಧ ದಿನಾಂಕ: 30.09.2021ರಂದು ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಂಗಳೂರು ಇವರು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿನ ಕ್ರಮ ಸಂಖ್ಯೆ: 1, 2, 3, 4, 5, 6, 7 ಮತ್ತು 8 ಆಕ್ಷೇಪಣೆಗಳಿಗೆ ಅನುಪಾಲನಾ ವರದಿಯನ್ನು ಸಿದ್ದಪಡಿಸಿ ಪ್ರಸ್ತಾವನೆಯ ವಿಷಯವನ್ನು ಸಭೆಯ ಮುಂದೆ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ 2020–21ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗೆ ತಯಾರಿಸಿರುವ ಅನುಪಾಲನಾ ವರದಿಯನ್ನು ಕೂಲಕುಂಷವಾಗಿ ಪರಿಶೀಲಿಸಿ ಅನುಪಾಲನಾ ವರದಿಯಲ್ಲಿ ನಮೂದಿಸಿರುವ ಅಂಶಗಳು ಸೂಕ್ತವಾಗಿರುತ್ತದೆ ಎಂದು ಸ ಭೆಯು ಅಭಿಪ್ರಾಯಿಸಿತು. ಮುಂದುವರೆದು, ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಕೈಗೊಂಡಿರುವ ಲೆಕ್ಕ ತನಿಖಾ ವರದಿಯಲ್ಲಿನ ಆಕ್ಷೇಪಣೆ/ನ್ಯೂನ್ಯತೆಗಳ ಕಂಡಿಕೆ ಸಂಖ್ಯೆ: 1, 2, 3, 4, 5, 6, 7 ಮತ್ತು 8 ರವರೆಗೆ ವಿವರಿಸಲಾದ ಪ್ರಾಧಿಕಾರದ ಅನುಪಾಲನಾ ವರದಿಯನ್ನು ಸ್ವಕ್ಷಮ ಪ್ರಾಧಿಕಾರದ ಮುಖಾಂತರ ಲೆಕ್ಕಪರಿಶೋಧನಾ ಇಲಾಖೆಗೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

II ತಾಂತ್ರಿಕ ಶಾಖೆ ಪ್ರಸ್ತಾವನೆಗಳು

1) ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯ ನೀಡಿರುವುದನ್ನು ಸ್ಥಿರೀಕರಿಸುವ ಬಗ್ಗೆ.

*****

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಜುಲೈ–2021 ರಿಂದ ಸೆಪ್ಟಂಬರ್–2021 ಮಾಹೆಯಲ್ಲಿ ಕಟ್ಟಡ ಕಟ್ಟಲು ಒಟ್ಟು 26 ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ನೀಡಿರುವ ವಿವರಗಳನ್ನು ಅನುಬಂಧ–3ರಲ್ಲಿ ಲಗತ್ತಿಸಿದ್ದು, ಸದರಿ ವಿಷಯವನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ಜುಲೈ–2021 ರಿಂದ ಸೆಪ್ಟಂಬರ್–2021 ರಲ್ಲಿ ಕಟ್ಟಡ ಪರವಾನಗೆ ಸಂಬಂಧ ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರ/ ತಾಂತ್ರಿಕ ಅಭಿಪ್ರಾಯಗಳನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.

III ವಿನ್ಯಾಸ ಅನುಮೋದನೆ ಪ್ರಕರಣಗಳು

1) ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತರೀಪುರ ಗ್ರಾಮದ ಸರ್ವೆ ಸಂಖ್ಯೆ: 236/2ರ 01ಎ–07ಗು ಮತ್ತು ಸರ್ವೆ ಸಂಖ್ಯೆ: 237/2ರ 02ಎ–30ಗು ಒಟ್ಟು 03ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಅಹದ್ ಬಿಲ್ಡರ್ಸ್ ಪೈ.ಲಿ., ಇವರು ಸಲ್ಲಿಸಿರುವ ಮನವಿ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಮೆ॥ ಅಹದ್ ಬಿಲ್ಡರ್ಸ್ ಪೈ.ಲಿ. ರವರು ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತರೀಪುರ ಗ್ರಾಮದ ಸರ್ವೆ ಸಂಖ್ಯೆ: 236/2ರ 01ಎ–07ಗು ಮತ್ತು

ಸರ್ವೆ ಸಂಖ್ಯೆ: 237/2ರ 02ಎ–30ಗು ಒಟ್ಟು 03ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 340 ಮೈಅಪ್ರಾ 2020(ಇ) ಬೆಂಗಳೂರು, ದಿನಾಂಕ:21.01.2021ರಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ನಯೋ–2/ ಭೂಉಬ/08/2017–18/1135, ದಿನಾಂಕ:03.02.2021ರಲ್ಲಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರ ಅಧಿಕೃತ ಜ್ಞಾಪನ ಸಂಖ್ಯೆ:243204, ದಿನಾಂಕ:07.09.2021 ರಲ್ಲಿ ಸರ್ವೆ ಸಂಖ್ಯೆ:237/2ರ 02ಎ–30ಗು ಮತ್ತು ಸಂಖ್ಯೆ:242459, ದಿನಾಂಕ:07.09.2021 ರಲ್ಲಿ ಸರ್ವೆ ಸಂಖ್ಯೆ:236/2ರ 01ಎ–07ಗು ಜಮೀನುಗಳನ್ನು ವಸತಿ (Layout) ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಮಂಡ್ಯ ಇವರ ಪತ್ರ ಸಂಖ್ಯೆ: ಬಿಎಂಐಸಿಪಿ/ವಿಭೂಸ್ವಾ(2)/ಸಿಆರ್//2017–18, ದಿನಾಂಕ:27.06.2017 ರಲ್ಲಿ "ಬಿಎಂಐಸಿ ಯೋಜನೆಗೆ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತರೀಪುರ ಗ್ರಾಮದ ಸರ್ವೆ ಸಂಖ್ಯೆ: 236/2 ಮತ್ತು ಸರ್ವೆ ಸಂಖ್ಯೆ: 237/2ರ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ವರದಿ ಸಲ್ಲಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕಕೈಪ್ರಮಂ, ವಲಯ ಕಛೇರಿ, ಮೈಸೂರು ಇವರ ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/204/2017–18/815, ದಿನಾಂಕ:09.10.2017 ರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತರೀಪುರ ಗ್ರಾಮದ ಸರ್ವೆ ಸಂಖ್ಯೆ: 236/2ರ 01ಎ–07ಗು ಮತ್ತು ಸರ್ವೆ ಸಂಖ್ಯೆ: 237/2ರ 02ಎ–30ಗು ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ" ಎಂದು ವರದಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆ ಸಂಬಂಧ ದಿನಾಂಕ:18.09.2021ರಂದು ಪ್ರಾಧಿಕಾರದಿಂದ ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಸರ್ವೆ ಸಂಖ್ಯೆ:237/2ರ ಜಮೀನಿನ ಉತ್ತರಕ್ಕೆ 24.0ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸರ್ವೆ ಸಂಖ್ಯೆ:236/2ರ ಜಮೀನು ಸರ್ವೆ ಸಂಖ್ಯೆ:237/2ರ ಜಮೀನಿಗೆ ಹೊಂದಿಕೊಂಡಿರುತ್ತದೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಚಾವಿಸನಿನಿ, ಶ್ರೀರಂಗಪಟ್ಟಣ ರವರ ಪತ್ರ ಸಂಖ್ಯೆ:ಸಕಾನಿಇಂ(ವಿ)/ಸಇಂ(ತಾಂ)/ ಶ್ರೀರಂಪ/ 2021–22/795, ದಿನಾಂಕ:07.09.2021ರಲ್ಲಿ ಸದರಿ ಜಮೀನಿಗೆ ಸ್ವಯಂ ಕಾರ್ಯ ನಿರ್ವಹಣೆ ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಲು ನಮ್ಮ ನಿಗಮದಿಂದ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ದೃಢೀಕರಿಸಿರುತ್ತಾರೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈರ್ಮಲ್ಯ ಉಪ ವಿಭಾಗ, ಶ್ರೀರಂಗಪಟ್ಟಣ ರವರು ಪತ್ರ ಸಂಖ್ಯೆ: ಸ.ಕಾ.ಅ/ಗ್ರಾ.ಕು.ನೀ&ನೈ/ಉಪ ವಿಭಾಗ/ಶ್ರೀ.ರ.ಪ್ರ/2021–22/158, ದಿನಾಂಕ:07.09.2021 ರಲ್ಲಿ ಸದರಿ ಬಡಾವಣೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸಂಬಂಧಿಸಿದಂತೆ ನಮಗೆ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮೇಳಾಪುರ ಗ್ರಾಮ ಪಂಚಾಯಿತಿ ರವರ ಪತ್ರ ಸಂಖ್ಯೆ:ಮೇ.ಗ್ರಾ.ಪಂ/ / 2020–21, ದಿನಾಂಕ:28.09.2021ರಲ್ಲಿ ಪ್ರಸ್ತಾಪಿತ ಜಮೀನುಗಳಲ್ಲಿ ಅರ್ಜಿದಾರರು ಬಡಾವಣೆಯನ್ನು ಅಭಿವೃದ್ಧಿಪಡಿಸಲು ಯಾವುದೇ ಅಭ್ಯಂತರವಿರುವುದಿಲ್ಲವೆಂದೂ ಹಾಗೂ ಸದರಿ ಜಮೀನುಗಳಿಗೆ ಅರ್ಜಿದಾರರಿಂದ ನಿಯಮಾನುಸಾರ ಶುಲ್ಕವನ್ನು ಪಾವತಿಸಿಕೊಂಡು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಟ್ಟಿಸಿಕೊಡಲಾಗುವುದೆಂದು ದೃಢೀಕರಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯ ಭೂ ಉಪಯೋಗ ವಿಶ್ಲೇಷಣಾ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಭೂ ಉಪಯೋಗ	ನಕ್ಷೆಯ ಪ್ರಕಾರ ವಿಸ್ತೀರ್ಣ (ಚ.ಮೀ.ಗಳಲ್ಲಿ)	ನಕ್ಷೆ ಪ್ರಕಾರ ಶೇಕಡವಾರು	ವಲಯ ನಿಯಮಾವಳಿಯಂತೆ ಶೇಕಡವಾರು
1	ವಸತಿ	7900.19	49.74	ಗರಿಷ್ಠ 55.00
2	ಉದ್ಯಾನವನ ಮತ್ತು ಬಯಲುಜಾಗ	1595.48	10.05	ಕನಿಷ್ಠ 10.00
3	ನಾಗರೀಕ ಸೌಲಭ್ಯ	804.26	05.06	ಕನಿಷ್ಠ 5.00
4	ರಸ್ತೆ	5583.76	35.15	–
	ಒಟ್ಟು	**15883.69**	**100.00**	–

ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯಲ್ಲಿನ ಭೂ ಉಪಯೋಗಗಳು ವಲಯ ನಿಯಮಾವಳಿಗಳ ಮಿತಿಯಲ್ಲಿರುವುದರಿಂದ ಹಾಗೂ ರಸ್ತೆ ಪರಿಚಲನೆ ಸೂಕ್ತವಾಗಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನುಗಳನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ನಂತರ ಸರ್ಕಾರದಿಂದ ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಜಮೀನುಗಳಿಗೆ ರಸ್ತೆ ಸಂಪರ್ಕವಿರುವುದರಿಂದ ಮತ್ತು ಅರ್ಜಿದಾರರು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಶ್ರೀರಂಗಪಟ್ಟಣ ತಾಲ್ಲೂಕುರವರು ದೃಢೀಕರಿಸಿರುವ ಸರ್ವೆ ನಕ್ಷೆಯನ್ವಯ ವಸತಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ಪ್ರಾಧಿಕಾರದ ವಲಯ ನಿಯಮಾವಳಿಗೆ ಅನುಗುಣವಾಗಿರುವುದರಿಂದ, ನಿಯಮಾನುಸಾರ ಶುಲ್ಕಗಳನ್ನು ಪಾವತಿಸಿಕೊಂಡು ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತರೀಪುರ ಗ್ರಾಮದ ಸರ್ವೆ ಸಂಖ್ಯೆ: 236/2ರ 01ಎ–07ಗು ಮತ್ತು ಸರ್ವೆ ಸಂಖ್ಯೆ: 237/2ರ 02ಎ–30ಗು ಒಟ್ಟು 03ಎ–37ಗು ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ) ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಿನ್ನಕುರ್ಚಿ ಗ್ರಾಮದ ಸರ್ವೆ ಸಂಖ್ಯೆ:36/3ರ 01ಎಕರೆ, 36/4ರ 01ಎ–09ಗು, 36/7ರ 0ಎ–14ಗು, 37/1ರ 0ಎ–26ಗು ಮತ್ತು ಸರ್ವೆ ಸಂಖ್ಯೆ:37/2ರ 04ಎಕರೆ ಒಟ್ಟು 07ಎ–09ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡಲು ಶ್ರೀ ಹೆಚ್.ಎನ್.ಶಿವನಂಜಯ್ಯ, ಶ್ರೀ ಟಿ.ದಾಸಪ್ಪ ಮತ್ತು ಶ್ರೀ ಲಕ್ಷ್ಮೀನಾರಾಯಣಪ್ಪ ರವರು ಕೋರಿರುವ ಬಗ್ಗೆ.**

*****

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಿನ್ನಕುರ್ಚಿ ಗ್ರಾಮದ ಸರ್ವೆ ಸಂಖ್ಯೆ:36/3ರ 01ಎಕರೆ, 36/4ರ 01ಎ–09ಗು, 36/7ರ 0ಎ–14ಗು, 37/1ರ 0ಎ–26ಗು ಮತ್ತು ಸರ್ವೆ ಸಂಖ್ಯೆ:37/2ರ 04ಎಕರೆ ಒಟ್ಟು 07ಎ–09ಗು ವಿಸ್ತೀರ್ಣದ ಜಮೀನಿಗೆ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಕಾಮಗಾರಿಗಳು ಮುಕ್ತಾಯವಾಗಿದ್ದು, ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಲಗತ್ತಿಸಿ ಅಂತಿಮ ವಸತಿ ವಿನ್ಯಾಸ ಅನುಮೋದನೆ ನೀಡಲು ಶ್ರೀ ಹೆಚ್.ಎನ್.ಶಿವನಂಜಯ್ಯ, ಶ್ರೀ ಟಿ.ದಾಸಪ್ಪ, ಮತ್ತು ಶ್ರೀ ಲಕ್ಷ್ಮೀನಾರಾಯಣಪ್ಪ ರವರು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಿನ್ನಕುರ್ಚಿ ಗ್ರಾಮದ ಸರ್ವೆ ಸಂಖ್ಯೆ:36/3ರ 01ಎಕರೆ, 36/4ರ 01ಎ–09ಗು, 36/7ರ 0ಎ–14ಗು, 37/1ರ 0ಎ–26ಗು ಮತ್ತು ಸರ್ವೆ ಸಂಖ್ಯೆ:37/2ರ 04ಎಕರೆ ಒಟ್ಟು 07ಎ–09ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಶ್ರೀ ಹೆಚ್.ಎನ್.ಶಿವನಂಜಯ್ಯ, ಶ್ರೀ ಟಿ.ದಾಸಪ್ಪ, ಮತ್ತು ಶ್ರೀ ಲಕ್ಷ್ಮೀನಾರಾಯಣಪ್ಪ ಇವರುಗಳು ಕೋರಿರುವ ಕುರಿತು ದಿನಾಂಕ:26.03.2018ರ ಪ್ರಾಧಿಕಾರದ 61ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:18ರ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:19.08.2019ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಾಧಿಕಾರದಿಂದ ಪ್ರಸ್ತಾಪಿತ ವಿನ್ಯಾಸವನ್ನು ದಿನಾಂಕ:21.10.2021ರಂದು ಸ್ಥಳ ಪರಿಶೀಲಿಸಲಾಗಿ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಿದ್ದು, ಅನುಮೋದಿತ ವಿನ್ಯಾಸ ನಕ್ಷೆಯಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಕಾಮಗಾರಿ ಮುಕ್ತಾಯಗೊಂಡಿರುವ ಬಗ್ಗೆ ದೃಢೀಕರಣ ಪತ್ರಗಳನ್ನು ಸಲ್ಲಿಸಿರುತ್ತಾರೆ.

ಅದರಂತೆ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಈ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಹಾಲಿ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವಂತೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ಪಡೆದು

ಸಲ್ಲಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನಗಳಿಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2015 ಕಲಂ 17(2-ಬಿ) ರಂತೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:39ರ 02ಎ-24ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ. (ಶ್ರೀ ಎಸ್.ಎಂ.ಕೃಷ್ಣ ಬಿನ್ ಎಸ್.ಎಂ.ಮಲ್ಲಯ್ಯ)**

*****

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:39ರ 02ಎ-24ಗು ವಿಸ್ತೀರ್ಣದ ಜಮೀನಿಗೆ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಕಾಮಗಾರಿಗಳು ಮುಕ್ತಾಯವಾಗಿದ್ದು, ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಲಗತ್ತಿಸುತ್ತಾ, ಅಂತಿಮ ವಸತಿ ವಿನ್ಯಾಸ ಅನುಮೋದನೆ ನೀಡಲು ಶ್ರೀ ಎಸ್.ಎಂ.ಕೃಷ್ಣ ಬಿನ್ ಎಸ್.ಎಂ.ಮಲ್ಲಯ್ಯ ರವರು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:39ರ 02ಎ-24ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಶ್ರೀ ಎಸ್.ಎಂ.ಕೃಷ್ಣ ಇವರು ಕೋರಿದ್ದು ಮತ್ತು ದಿನಾಂಕ:05.03.2018ರ ಪ್ರಾಧಿಕಾರದ 60ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:7ರ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:09.10.2020ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಶ್ನಿತ ವಿನ್ಯಾಸವನ್ನು ದಿನಾಂಕ:19.08.2021ರಂದು ಸ್ಥಳ ಪರಿಶೀಲಿಸಲಾಗಿ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಿದ್ದು, ಅನುಮೋದಿತ ವಿನ್ಯಾಸ ನಕ್ಷೆಯಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಕಾಮಗಾರಿ ಮುಕ್ತಾಯಗೊಂಡಿರುವ ಬಗ್ಗೆ ದೃಢೀಕರಣ ಪತ್ರಗಳನ್ನು ಸಹ ಸಲ್ಲಿಸಿರುತ್ತಾರೆ.

ಅದರಂತೆ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಈ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರ ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಹಾಗೂ ಕಾಮಗಾರಿಗಳು ಪೂರ್ಣಗೊಂಡಿರುವ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ ಪತ್ರಗಳನ್ನು

ಸಲ್ಲಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಪ್ರಸ್ತಾಪಿತ ವಸತಿ ವಿನ್ಯಾಸಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2-ಬಿ) ರಂತೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸ.ನಂ. 181/1ರ 03ಎ-05ಗು ಮತ್ತು 181/2ರ 03ಎಕರೆ ಒಟ್ಟು 06ಎಕರೆ-05ಗುಂಟೆ ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಅಧ್ಯಕ್ಷರು, ವಿಶ್ವಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ಇವರು ಸಲ್ಲಿಸಿರುವ ಮನವಿ ಕುರಿತು.**

*****

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸ.ನಂ. 181/1ರ 03ಎ-05ಗು ಮತ್ತು 181/2ರ 03ಎಕರೆ ಒಟ್ಟು 06ಎಕರೆ-05ಗುಂಟೆ ವಿಸ್ತೀರ್ಣದ ಜಮೀನಿಗೆ ಅನುಮೋದನೆಯಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ವಿನ್ಯಾಸವನ್ನು ಅಭಿವೃದ್ಧಿಪಡಿಸಿ, ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳನ್ನು ಲಗತ್ತಿಸಿ ಅಂತಿಮ ವಸತಿ ವಿನ್ಯಾಸ ಅನುಮೋದನೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸ.ನಂ. 181/1ರ 03ಎ-05ಗು ಮತ್ತು 181/2ರ 03ಎಕರೆ ಒಟ್ಟು 06ಎಕರೆ-05ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಅಧ್ಯಕ್ಷರು, ವಿಶ್ವಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ಇವರು ದಿನಾಂಕ:23.02.2019ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ, ವಿಷಯವನ್ನು ದಿನಾಂಕ:08.07.2019ರಂದು ಜರುಗಿದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:20ರಲ್ಲಿ ಮಂಡಿಸಲಾಗಿ, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:03.08.2019ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಾಧಿಕಾರದಿಂದ ದಿನಾಂಕ:31.07.2021ರಂದು ಸ್ಥಳ ಪರಿಶೀಲಿಸಲಾಗಿ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಿದ್ದು, ಅನುಮೋದಿತ ವಿನ್ಯಾಸ ನಕ್ಷೆಯಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಕಾಮಗಾರಿ ಮುಕ್ತಾಯಗೊಂಡಿರುವ ಬಗ್ಗೆ ದೃಢೀಕರಣ ಪತ್ರಗಳನ್ನು ಸಹ ಸಲ್ಲಿಸಿರುತ್ತಾರೆ ಹಾಗೂ ಸದರಿ ಬಡಾವಣೆಯ ನಿವೇಶನಗಳ ಅಳತೆಗಳಲ್ಲಿ ಹಾಲಿ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವಂತೆ ಕೆಲವೊಂದು ಸಣ್ಣ ಪುಟ್ಟ ಬದಲಾವಣೆಗಳಾಗಿರುವುದು ಕಂಡುಬಂದಿದ್ದು, ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ.

ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು (ನಿವೇಶನಗಳ ಅಳತೆ ಹೊರತುಪಡಿಸಿ) ಪೂರ್ಣಗೊಳಿಸಿದ್ದು, ಈ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರ ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಹಾಲಿ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವಂತೆ

ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಹಾಗೂ ಕಾಮಗಾರಿಗಳು ಪೂರ್ಣಗೊಂಡಿರುವ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ ಪತ್ರಗಳನ್ನು ಸಲ್ಲಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವಂತೆ ಸಣ್ಣಪುಟ್ಟ ಬದಲಾವಣೆಗಳಿದ್ದಲ್ಲಿ ಪೂರಕ ದಾಖಲೆ ಪಡೆದು ವಲಯ ನಿಯಮಾವಳಿಗಳ ಪರಿಮಿತಿಯಲ್ಲಿ ಪರಿಶೀಲಿಸಿಕೊಂಡು, ಪ್ರಸ್ತಾಪಿತ ವಸತಿ ವಿನ್ಯಾಸಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2-ಬಿ) ರಂತೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

5) ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ: 162/4ರ 02ಎ-02ಗು, 163/4ರ 01ಎ-07ಗು, 164/4ರ 01ಎ-18ಗು, 173ರ 05ಎ-28ಗು, 262/1ರ 01ಎ-08ಗು ಮತ್ತು ಸರ್ವೆ ಸಂಖ್ಯೆ: 262/2ರ 02ಎ-09ಗು ಒಟ್ಟು 13ಎ-32ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.(ಶ್ರೀ ಎಸ್.ವಿ.ಬಾಬು ಬಿನ್ ಶ್ರೀ ರಾಮಭದ್ರ ಶೆಟ್ಟಿ)

*****

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ: 162/4ರ 02ಎ-02ಗು, 163/4ರ 01ಎ-07ಗು, 164/4ರ 01ಎ-18ಗು, 173ರ 05ಎ-28ಗು, 262/1ರ 01ಎ-08ಗು ಮತ್ತು ಸರ್ವೆ ಸಂಖ್ಯೆ: 262/2ರ 02ಎ-09ಗು ಒಟ್ಟು 13ಎ-32ಗು ವಿಸ್ತೀರ್ಣದ ಜಮೀನಿಗೆ ಅನುಮೋದನೆಯಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಕಾಮಗಾರಿಗಳು ಮುಕ್ತಾಯವಾಗಿದ್ದು, ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಲಗತ್ತಿಸುತ್ತಾ, ಅಂತಿಮ ವಸತಿ ವಿನ್ಯಾಸ ಅನುಮೋದನೆ ನೀಡಲು ಶ್ರೀ ಎಸ್.ವಿ.ಬಾಬು ಬಿನ್ ಶ್ರೀ ರಾಮಭದ್ರ ಶೆಟ್ಟಿ ರವರು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ: 162/4ರ 02ಎ-02ಗು, 163/4ರ 01ಎ-07ಗು, 164/4ರ 01ಎ-18ಗು, 173ರ 05ಎ-28ಗು, 262/1ರ 01ಎ-08ಗು ಮತ್ತು ಸರ್ವೆ ಸಂಖ್ಯೆ: 262/2ರ 02ಎ-09ಗು ಒಟ್ಟು 13ಎ-32ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಶ್ರೀ ಎಸ್.ವಿ.ಬಾಬು ಬಿನ್ ಶ್ರೀ ರಾಮಭದ್ರ ಶೆಟ್ಟಿ ಇವರು ಕೋರಿದ್ದು ಮತ್ತು ದಿನಾಂಕ:20.01.2020ರ ಪ್ರಾಧಿಕಾರದ 64ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ: III(1)ರ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:07.12.2020ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಾಧಿಕಾರದಿಂದ ಸದರಿ ಬಡಾವಣೆಯ ಸ್ಥಳ ಪರಿಶೀಲಿಸಲಾಗಿ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಕಾಮಗಾರಿ ಮುಕ್ತಾಯಗೊಂಡಿರುವ ಬಗ್ಗೆ ದೃಢೀಕರಣ ಪತ್ರಗಳನ್ನು ಸಹ ಸಲ್ಲಿಸಿರುತ್ತಾರೆ.

ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿಪಡಿಸಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರ ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಹಾಗೂ ಕಾಮಗಾರಿಗಳು ಪೂರ್ಣಗೊಂಡಿರುವ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಪ್ರಸ್ತಾಪಿತ ವಸತಿ ವಿನ್ಯಾಸಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಬಿ) ರಂತೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

6) **ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:623/2ರ 01ಎ–36ಗು, 624/2ರ 0ಎ–30ಗು ಒಟ್ಟು 02ಎ–26ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ. (ಶ್ರೀಮತಿ ನಿರ್ಮಲ ಜಯರಾಜ್ ಕೋಂ ಡಾ.ಪೌಲ್ ಜಯರಾಮ್)**

*****

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:623/2ರ 01ಎ–36ಗು, 624/2ರ 0ಎ–30ಗು ಒಟ್ಟು 02ಎ–26ಗು ವಿಸ್ತೀರ್ಣದ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ ಪತ್ರ ಸಂಖ್ಯೆ:ಬಿ.ಎಂ.ಐ.ಸಿ.ಎ.ಪಿ.ಎ/ನ.ಯೋ–2/ವ.ವಿ.ಅ/16/82/2016–17/558, ದಿನಾಂಕ:16.08.2019 ರಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಜಮೀನಿನಲ್ಲಿ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸಲ್ಲಿಸಿದ್ದ ಪ್ರಸ್ತಾವನೆ ಹಾಗೂ ದೂರಿನ ಹಿನ್ನಲೆಯಲ್ಲಿ, ದಿನಾಂಕ: 23.09.2020ರಂದು ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಿ, ಸದರಿ ಜಮೀನಿನ ಗಡಿಯನ್ನು ಸ್ಪಷ್ಟವಾಗಿ ಗುರುತಿಸಿ ಘನ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ:OS 495/2019 ಮುಕ್ತಾಯಗೊಳಿಸಿರುವ ಬಗ್ಗೆ ದಾಖಲೆಯನ್ನು ಸಲ್ಲಿಸುವಂತೆ ದಿನಾಂಕ:30.09.2020ರ ಪ್ರಾಧಿಕಾರದ ಪತ್ರದಲ್ಲಿ ಅರ್ಜಿದಾರರಿಗೆ ತಿಳಿಸಲಾಗಿದೆ. ಸದರಿ ಹಿಂಬರಹಕ್ಕೆ ಸಂಬಂಧಿಸಿದಂತೆ ಘನ ಉಚ್ಚ ನ್ಯಾಯಾಲಯದ ರಿಟ್‌ಪಿಟಿಷನ್ ಸಂಖ್ಯೆ:1169/2021(LB-RES) ಪ್ರಕರಣ ದಾಖಲಿಸಿದ್ದು, ದಿನಾಂಕ:22.07.2021ರಲ್ಲಿ ಘನ ನ್ಯಾಯಾಲಯವು ಈ ಕಛೇರಿಯ ಹಿಂಬರಹ ದಿನಾಂಕ:30.09.2020 ಅನ್ನು ರದ್ದುಗೊಳಿಸಿ, ದಿನಾಂಕ:31.05.2019ರ ಅರ್ಜಿದಾರರ ಮನವಿಯಂತೆ ಘನ ನ್ಯಾಯಾಲಯದ ಆದೇಶದ ದಿನಾಂಕದಿಂದ ಎಂಟು (08) ವಾರಗಳೊಳಗಾಗಿ ನಿಯಮಾನುಸಾರ ಸೂಕ್ತ ಆದೇಶ ಹೊರಡಿಸುವಂತೆ ಆದೇಶಿಸಿರುತ್ತದೆ.

ಈ ಸಂಬಂಧ ದಿನಾಂಕ:13.08.2021ರ ಈ ಕಛೇರಿ ಪತ್ರದಲ್ಲಿ ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮವಹಿಸುವ ಸಂಬಂಧ ದಿನಾಂಕ:16.08.2019ರಲ್ಲಿ ಈ ಕಛೇರಿಯಿಂದ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಬಡಾವಣೆಯನ್ನು ಅಭಿವೃದ್ಧಿಪಡಿಸಿ ಹಾಗೂ ಪ್ರಶ್ನಿತ ಬಡಾವಣೆಯ ನಿವೇಶನಗಳಿಗೆ ಗ್ರಾಮಪಂಚಾಯತಿಯಲ್ಲಿ ಖಾತೆ ನೊಂದಾಯಿಸದಿರುವ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ರವರಿಂದ ದೃಢೀಕರಣ ಪತ್ರ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಲು ಅರ್ಜಿದಾರಿಗೆ ಸೂಚಿಸಿದೆ.

ಸದರಿ ಬಡಾವಣೆಯಲ್ಲಿನ ನಿವೇಶನಗಳಿಗೆ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ವತಿಯಿಂದ ಯಾವುದೇ ಖಾತೆ ಮಾಡಿರುವುದಿಲ್ಲ. ಜಾಗದ ಮಾಲೀಕರಿಂದ ಖಾತೆ ಮಾಡಲು ಮನವಿಯನ್ನು ಸಹ ಪಂಚಾಯಿತಿಯಲ್ಲಿ ಸ್ವೀಕರಿಸಿರುವುದಿಲ್ಲ ಎಂದು ದಿನಾಂಕ:06.09.2021ರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ರವರ ದೃಢೀಕರಣ ಪತ್ರ ನೀಡಿರುತ್ತಾರೆ.

ಅರ್ಜಿದಾರರು ದಿನಾಂಕ:13.09.2021ರ ಮನವಿಯಲ್ಲಿ, ಪ್ರಶ್ನಿತ ಜಮೀನಿನ ಭಾಗಶಃ ಪ್ರದೇಶವು ಬಾಜುವಿನ ಖಾತೆದಾರರು ಒತ್ತುವರಿ ಮಾಡಿಕೊಂಡಿರುವುದು ಸ್ವತಃ ತಿಳಿಸಿ ಸದರಿ ಒತ್ತುವರಿಯನ್ನು ತೆರವುಗೊಳಿಸುವಂತೆ ಕೋರಿ ತಹಶೀಲ್ದಾರ್, ಮೈಸೂರು ತಾಲ್ಲೂಕುರವರಿಗೆ ಮನವಿ ಸಲ್ಲಿಸಿರುವ ಹಿನ್ನಲೆಯಲ್ಲಿ, ಈ ಕಛೇರಿಯ ಪತ್ರದ ದಿನಾಂಕ:08.10.2021ರಲ್ಲಿ ಪ್ರಶ್ನಿತ ಜಮೀನಿನಲ್ಲಿ ಒತ್ತುವರಿಯಾಗಿದ್ದಲ್ಲಿ ವಿನ್ಯಾಸದ ವಿಸ್ತೀರ್ಣದಲ್ಲಿ ವ್ಯತ್ಯಾಸವಾಗುವುದರಿಂದ ಹಾಗೂ ಒತ್ತುವರಿಯಾಗಿರುವ ಪ್ರದೇಶವನ್ನು ತೆರವುಗೊಳಿಸುವಂತೆ ಈಗಾಗಲೇ ಕೋರಿರುವುದರಿಂದ, ಅದನ್ನು ತಹಶೀಲ್ದಾರ್, ಮೈಸೂರು ತಾಲ್ಲೂಕು ರವರು ತೆರವುಗೊಳಿಸಿರುವ ಬಗ್ಗೆ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸಲು ಅಥವಾ ಒತ್ತುವರಿಯಾಗಿರುವ ಪ್ರದೇಶವನ್ನು ಸ್ಪಷ್ಟವಾಗಿ ಅಳತೆಗಳೊಂದಿಗೆ ಗುರುತಿಸಿ ಮತ್ತು ಹಾಲಿ ಸಂಪರ್ಕ ರಸ್ತೆ ಗುರುತಿಸುವುದರ ಜೊತೆಗೆ ಜಮೀನಿನ ಅಳತೆಗಳನ್ನು ನಮೂದಿಸಿರುವ ಭೂ ದಾಖಲೆಗಳ ಸಹಾಯಕ ನಿರ್ದೇಶಕರವರಿಂದ ದೃಢೀಕರಿಸಲ್ಪಟ್ಟ ಸರ್ವೆ ಸ್ಕೆಚ್‌ನ ಮೂಲ ಪ್ರತಿ ಹಾಗೂ ಸದರಿ ಸರ್ವೆ ನಕ್ಷೆಯನ್ವಯ ಮತ್ತು ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ತಯಾರಿಸಿರುವ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಸಲ್ಲಿಸಲು ಅರ್ಜಿದಾರರಿಗೆ ಸೂಚಿಸಲಾಗಿದೆ.

ಘನ ನ್ಯಾಯಾಲಯದ ಆದೇಶದನ್ವಯ ಕ್ರಮವಹಿಸಬೇಕಾಗಿರುವ ಹಿನ್ನಲೆಯಲ್ಲಿ, ದಿನಾಂಕ:08.10.2021ರ ಈ ಕಛೇರಿಯ ಪತ್ರದಲ್ಲಿ ತಿಳಿಸಿರುವ ಅಂಶಗಳಿಗೆ ಅನುಗುಣವಾಗಿ ಪೂರಕ ದಾಖಲೆ/ಮಾಹಿತಿಯನ್ನು ಅರ್ಜಿದಾರರಿಂದ ಪಡೆದು, ಸದರಿ ಬಡಾವಣೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಮುಂದಿನ ಕ್ರಮವಹಿಸುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪೆಟಿಷನ್ ಸಂಖ್ಯೆ: 1169/2021 (LB-RES) ದಿನಾಂಕ:22.07.2021ರ ತೀರ್ಪನ್ನು ಓದಿ ಸಭೆಯ ಅವಗಾಹನೆಗೆ ತರಲಾಯಿತು. ಈ ಪ್ರಸ್ತಾವನೆಯ ಕುರಿತು ಘನ ನ್ಯಾಯಾಲಯದ ಆದೇಶದನ್ವಯ ಮುಂದಿನ ಕ್ರಮವಹಿಸುವ ಸಂಬಂಧ ದಿನಾಂಕ:08.10.2021ರ ಈ ಕಛೇರಿ ಪತ್ರದಲ್ಲಿ ತಿಳಿಸಿರುವ ಅಂಶಗಳಿಗೆ ಅನುಗುಣವಾಗಿ ಪೂರಕ ಮಾಹಿತಿ/ದಾಖಲೆಯನ್ನು ಅರ್ಜಿದಾರರಿಂದ ಪಡೆದು, ಅರ್ಜಿದಾರರು ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಪರಿಶೀಲಿಸಿಕೊಂಡು ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ವಲಯ ನಿಯಮಾವಳಿಗಳ ಪರಿಮಿತಿಯಲ್ಲಿ ಅಂತಿಮ ವಸತಿ ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿ, ಪ್ರಸ್ತಾಪಿತ ವಸತಿ ವಿನ್ಯಾಸಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಬಿ) ರಂತೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

7) **ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:26/4ರ 0ಎ–07ಗು, 26/5ರ 0ಎ–06ಗು, 26/6ರ 02ಎ–06ಗು, 26/9ರ (ಹಳೆ ಸರ್ವೆ ಸಂಖ್ಯೆ:26/3) 0ಎ–07ಗು, 27/1ರ 0ಎ–13ಗು, 27/2ರ 0ಎ–25ಗು, 27/3ರ 0ಎ–08ಗು, 27/4ರ 0ಎ–30ಗು, 27/5ರ 0ಎ–12ಗು, 27/6ರ 01ಎಕರೆ, 28/2ರ 0ಎ–19ಗು, 28/3ರ 0ಎ–22ಗು, 28/4ರ 0ಎ–22ಗು, 28/7ರ 0ಎ–16ಗು, 28/8ರ 0ಎ–34ಗು, 28/9(ಹಳೆ ಸರ್ವೆ ಸಂಖ್ಯೆ:28/1)ರ 0ಎ–16ಗು, 28/10(ಹಳೆ ಸರ್ವೆ ಸಂಖ್ಯೆ:28/5)ರ ರ 0ಎ–06½ಗು, 29ರ 0ಎ–18ಗು, 35/1ರ 01ಎ–33ಗು, 35/3ರ 0ಎ–24ಗು, 36/1ರ 0ಎ–38ಗು, 36/2ರ 0ಎ–35ಗು, 36/4 (ಹಳೆ ಸರ್ವೆ ಸಂಖ್ಯೆ:36/3)ರ 0ಎ–31ಗು, 36/5(ಹಳೆ ಸರ್ವೆ ಸಂಖ್ಯೆ:36/1)ರ 0ಎ–28ಗು, 39/2ರ 02ಎ–06ಗು ಒಟ್ಟು 17ಎ–22½ಗು ವಿಸ್ತೀರ್ಣದಜಮೀನಿಗೆ ನೀಡಿರುವ ವಸತಿ ವಿನ್ಯಾಸ ಅನುಮೋದನೆಯನ್ನು ನವೀಕರಿಸಲು ಕೋರಿರುವ ಬಗ್ಗೆ.**

*****

ಅರ್ಜಿದಾರರಾದ ಶ್ರೀ ರೇವಣ್ಣ ಸಿದ್ಧಯ್ಯ ಬಿನ್ ಲೇಟ್ ನರಸಿಂಹಯ್ಯ, ಡಾ॥ ಶೇಖ್‌ರಹಿಮಾನ್ ಅಧ್ಯಕ್ಷರು, ರೈಲ್ವೇಮೆನ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಮತ್ತು ಶ್ರೀ ಎಲ್.ವಿನಯ್ (ಜಿಪಿಎದಾರರು) ಇವರು ದಿನಾಂಕ:02.08.2021ರಂದು ಮನವಿ ಸಲ್ಲಿಸಿ, ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:26/4ರ 0ಎ–07ಗು, 26/5ರ 0ಎ–06ಗು, 26/6ರ 02ಎ–06ಗು, 26/9ರ (ಹಳೆ ಸರ್ವೆ ಸಂಖ್ಯೆ:26/3) 0ಎ–07ಗು, 27/1ರ 0ಎ–13ಗು, 27/2ರ 0ಎ–25ಗು, 27/3ರ 0ಎ–08ಗು, 27/4ರ 0ಎ–30ಗು, 27/5ರ 0ಎ–12ಗು, 27/6ರ 01ಎಕರೆ, 28/2ರ 0ಎ–19ಗು, 28/3ರ 0ಎ–22ಗು, 28/4ರ 0ಎ–22ಗು, 28/7ರ 0ಎ–16ಗು, 28/8ರ 0ಎ–34ಗು, 28/9(ಹಳೆ ಸರ್ವೆ ಸಂಖ್ಯೆ:28/1)ರ 0ಎ–16ಗು, 28/10(ಹಳೆ ಸರ್ವೆ ಸಂಖ್ಯೆ:28/5)ರ ರ 0ಎ–06½ಗು, 29ರ 0ಎ–18ಗು, 35/1ರ 01ಎ–33ಗು, 35/3ರ 0ಎ–24ಗು, 36/1ರ 0ಎ–38ಗು, 36/2ರ 0ಎ–35ಗು, 36/4 (ಹಳೆ ಸರ್ವೆ ಸಂಖ್ಯೆ:36/3)ರ 0ಎ–31ಗು, 36/5(ಹಳೆ ಸರ್ವೆ ಸಂಖ್ಯೆ:36/1)ರ 0ಎ–28ಗು, 39/2ರ 02ಎ–06ಗು ಒಟ್ಟು 17ಎ–22½ಗು ವಿಸ್ತೀರ್ಣದ ಜಮೀನಿಗೆ ದಿನಾಂಕ:14.09.2019ರಂದು ಪ್ರಾಧಿಕಾರದಿಂದ ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆಯನ್ನು ಪಡೆದುಕೊಂಡಿದ್ದು, ಆದರೆ ಪ್ರಾಧಿಕಾರದಿಂದ ನೀಡಿರುವ ಸದರಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ಎರಡು (02) ವರ್ಷಗಳ ಅವಧಿಯೊಳಗೆ ಕೋವಿಡ್–19 ಕಾರಣದಿಂದಾಗಿ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸುತ್ತಾ, ಇನ್ನೂ ಎರಡು (02) ವರ್ಷಗಳ ಅವಧಿಗೆ ವಸತಿ ವಿನ್ಯಾಸ ಮಂಜೂರಾತಿ ಅವಧಿಯನ್ನು ನವೀಕರಿಸಿಕೊಡುವಂತೆ ಕೋರಿರುತ್ತಾರೆ ಹಾಗೂ ಪ್ರಾಧಿಕಾರವು ನವೀಕರಿಸುವ ಎರಡು (02) ವರ್ಷಗಳಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳು ಮತ್ತು ಇತರೆ ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಶೇ.100ರಷ್ಟು ನಿವೇಶನಗಳ ಬಿಡುಗಡೆಗೆ ಪ್ರಾಧಿಕಾರಕ್ಕೆ ತಿಳಿಸಲಾಗುವುದು ಎಂದು ಸಹ ತಿಳಿಸಿರುತ್ತಾರೆ.

ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ನ.ಯೋ–1/ವಿನ್ಯಾಸ/19/2017–18, ದಿನಾಂಕ:04.09.2019ರಂತೆ ಕೆಲವು ನಿಬಂಧನೆಗಳನ್ನು ವಿಧಿಸಿ, ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ (For Demarcation and Development purpose only) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2–ಎ)ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿರುತ್ತದೆ ಮತ್ತು ಸದರಿ ಪತ್ರದ ನಿಬಂಧನೆ ಸಂಖ್ಯೆ(1) ರಲ್ಲಿ **"ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ನೀಡಿದ ದಿನಾಂಕದಿಂದ ಎರಡು (02)ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ಕನಿಷ್ಠ 03(ಮೂರು) ತಿಂಗಳು ಮೊದಲೇ ನವೀಕರಿಸಿಕೊಳ್ಳತಕ್ಕದ್ದು"** ಎಂದು ಷರತ್ತು ವಿಧಿಸಲಾಗಿದೆ. ಅದರಂತೆ ದಿನಾಂಕ:03.09.2021ಕ್ಕೆ ಅನುಮೋದಿತ ವಸತಿ ವಿನ್ಯಾಸದ 02ವರ್ಷಗಳ ಅವಧಿಯು ಮುಕ್ತಾಯವಾಗುತ್ತದೆ.

ಮೇಲ್ಕಂಡ ಅಂಶಗಳನ್ವಯ ವಸತಿ ವಿನ್ಯಾಸ ಮಂಜೂರಾತಿ ಅವಧಿಯು ದಿನಾಂಕ:03.09.2021ಕ್ಕೆ 02ವರ್ಷ ಪೂರ್ಣಗೊಳ್ಳುವುದರಿಂದ, ಅರ್ಜಿದಾರರ ಕೋರಿಕೆಯಂತೆ ವಸತಿ ವಿನ್ಯಾಸದ ಮಂಜೂರಾತಿ ಅವಧಿಯನ್ನು ವಿಸ್ತರಿಸಿ ನವೀಕರಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ವಿನ್ಯಾಸಕ್ಕೆ ದಿನಾಂಕ:04.09.2019ರಂದು ನೀಡಿರುವ ಅನುಮೋದನೆಯು ದಿನಾಂಕ:03.09.2021ಕ್ಕೆ 02ವರ್ಷ ಅವಧಿಯು ಮುಕ್ತಾಯವಾಗಿರುವುದರಿಂದ, ಅರ್ಜಿದಾರರ ಕೋರಿಕೆಯಂತೆ ಪ್ರಸ್ತಾಪಿತ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಅರ್ಜಿದಾರರಿಗೆ ದಿನಾಂಕ:04.09.2021 ರಿಂದ ದಿನಾಂಕ:03.09.2023ರವರೆಗೆ (02 ವರ್ಷ) ಹೆಚ್ಚಿನ ಕಾಲಾವಕಾಶ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

8) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:66/2 ರಲ್ಲಿ 02ಎ–06ಗು ಮತ್ತು 76ರಲ್ಲಿ 04ಎ–14ಗು ಒಟ್ಟು 06ಎ–20ಗು ವಿಸ್ತೀರ್ಣದ ಜಮೀನಿಗೆ ನೀಡಿರುವ ವಸತಿ ವಿನ್ಯಾಸ ಅನುಮೋದನೆಯನ್ನು ನವೀಕರಿಸಲು ಕೋರಿರುವ ಬಗ್ಗೆ.

*****

ಅರ್ಜಿದಾರರಾದ ಮೆ॥ ಬಿಡದಿ ರಿಯಾಲಿಟಿ ವೆಂಚರ್ಸ್ ರವರು ದಿನಾಂಕ:21.08.2021ರಂದು ಮನವಿ ಸಲ್ಲಿಸಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:66/2 ರಲ್ಲಿ 02ಎ–06ಗು ಮತ್ತು 76ರಲ್ಲಿ 04ಎ–14ಗು ಒಟ್ಟು 06ಎ–20ಗು ವಿಸ್ತೀರ್ಣದ ಜಮೀನಿಗೆ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ–02/22/2018–19/893, ದಿನಾಂಕ:03.08.2019ರಂತೆ ನೀಡಿರುವ ಎರಡು (02) ವರ್ಷಗಳ ತಾತ್ಕಾಲಿಕ ಅನುಮೋದನೆ ಮಂಜೂರಾತಿ ಅವಧಿಯು ದಿನಾಂಕ:03.08.2021ಕ್ಕೆ ಮುಕ್ತಾಯಗೊಂಡಿದ್ದು, ಆದರೆ ಕೋವಿಡ್–19 ಮತ್ತು ಇನ್ನಿತರೆ ಕಾರಣಗಳಿಂದಾಗಿ ಸದರಿ ಅವಧಿಯೊಳಗೆ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಸಾಧ್ಯವಾಗಿರುವುದಿಲ್ಲ ಎಂಬ ಅಂಶವನ್ನು ತಿಳಿಸುತ್ತಾ, ವಿನ್ಯಾಸ ನಕ್ಷೆಯ ಮಂಜೂರಾತಿ ಅವಧಿಯನ್ನು ಇನ್ನೂ ಎರಡು (02)ವರ್ಷಗಳ ಅವಧಿಗೆ ವಿಸ್ತರಿಸುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ವಿನ್ಯಾಸ–02/22/2018–19, ದಿನಾಂಕ:03.08.2019ರಂತೆ ಕೆಲವು ನಿಬಂಧನೆಗಳನ್ನು ವಿಧಿಸಿ, ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ (For Demarcation and Development purpose only) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2–ಎ)ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿದ್ದು, ಸದರಿ ನಿಬಂಧನೆ ಸಂಖ್ಯೆ(1) ರಲ್ಲಿ **"ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ಕನಿಷ್ಠ ಮೂರು (03) ತಿಂಗಳ ಮೊದಲೇ ನವೀಕರಿಸಿಕೊಳ್ಳತಕ್ಕದ್ದು"** ಎಂಬ ಷರತ್ತನ್ನು ವಿಧಿಸಲಾಗಿದೆ. ಅದರಂತೆ ದಿನಾಂಕ:02.08.2021ಕ್ಕೆ ಅನುಮೋದಿತ ವಸತಿ ವಿನ್ಯಾಸದ 02ವರ್ಷಗಳ ಅವಧಿಯು ಮುಕ್ತಾಯವಾಗಿರುತ್ತದೆ.

ಮೇಲ್ಕಂಡ ಅಂಶಗಳನ್ವಯ ವಸತಿ ವಿನ್ಯಾಸ ಮಂಜೂರಾತಿ ಅವಧಿಯು ದಿನಾಂಕ:02.08.2021ಕ್ಕೆ ಎರಡು (02) ವರ್ಷ ಪೂರ್ಣಗೊಂಡಿರುವುದರಿಂದ, ಅರ್ಜಿದಾರರ ಕೋರಿಕೆಯಂತೆ ವಸತಿ ವಿನ್ಯಾಸದ ಮಂಜೂರಾತಿ ಅವಧಿಯನ್ನು ವಿಸ್ತರಿಸಿ ನವೀಕರಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ವಿನ್ಯಾಸಕ್ಕೆ ದಿನಾಂಕ:03.08.2019ರಂದು ನೀಡಿರುವ ಅನುಮೋದನೆಯು ದಿನಾಂಕ:02.08.2021ಕ್ಕೆ 02ವರ್ಷ ಅವಧಿಯು

ಮುಕ್ತಾಯವಾಗಿರುವುದರಿಂದ, ಅರ್ಜಿದಾರರ ಕೋರಿಕೆಯಂತೆ ಪ್ರಸ್ತಾಪಿತ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಅರ್ಜಿದಾರರಿಗೆ ದಿನಾಂಕ:03.08.2021 ರಿಂದ ದಿನಾಂಕ:02.08.2023ರವರೆಗೆ (02 ವರ್ಷ) ಹೆಚ್ಚಿನ ಕಾಲಾವಕಾಶ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

IV **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳು**

1) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139ರ 02ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎನ್.ಜನಾರ್ದನ್ ಬಾಬು ಬಿನ್ ಹೆಚ್ ನಾರಾಯಣಸ್ವಾಮಿ ರವರು ಸಲ್ಲಿಸಿರುವ ಮನವಿ ಕುರಿತು

*****

ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139ರ 02ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎನ್.ಜನಾರ್ದನ್ ಬಾಬು ಬಿನ್ ಹೆಚ್ ನಾರಾಯಣಸ್ವಾಮಿ ರವರು ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139 ಅನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಪ್ರಾಧಿಕಾರದ ಮಹಾಯೋಜನೆಯಲ್ಲಿ ಗುರುತಿಸಲಾಗಿರುವುದಿಲ್ಲ. ಬಡಮನವರ್ತೆಕಾವಲ್ ಪೂರ್ಣ ಗ್ರಾಮವು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಬಿ.ಎಂ. ಕಾವಲ್ ಗ್ರಾಮದಲ್ಲಿ ಒಟ್ಟು 03 ಠಿಕ್ಕಾಗಳಿದ್ದು, ಈ ಪೈಕಿ ಬಿಎಂಐಸಿಎಪಿಎದ ಅನುಮೋದಿತ ಮಹಾಯೋಜನೆಯಲ್ಲಿ ಠಿಕ್ಕಾ–1 ಮಾತ್ರ ಅಳವಡಿಸಲಾಗಿದ್ದು, ಉಳಿದಂತೆ ಠಿಕ್ಕಾ–2 & 3 ಅನುಮೋದಿತ ಮಹಾಯೋಜನೆಯಲ್ಲಿ ಬಿಟ್ಟು ಹೋಗಿರುತ್ತದೆ.

ಈ ಹಿಂದೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಡಮನವರ್ತೆ ಕಾವಲ್ ಗ್ರಾಮದ ಸ.ನಂ:300 ಮತ್ತು 301ರಲ್ಲಿ ಒಟ್ಟು 05 ಎಕರೆ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಸಲ್ಲಿಸಿದ್ದ ಪ್ರಸ್ತಾವನೆಗೆ ಸಂಬಂಧಿಸಿದಂತೆ, ದಿನಾಂಕ:08.10.2013ರಂದು ಜರುಗಿದ 38ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:38.1ರಲ್ಲಿ "ಈಗಾಗಲೇ ಇದೇ ರೀತಿಯ ಪ್ರಕರಣಗಳಲ್ಲಿ ಸರ್ಕಾರವು ಭೂ ಬದಲಾವಣೆ ಆದೇಶವನ್ನು ಹೊರಡಿಸಿದ್ದು, ಒಂದೇ ರೀತಿಯ ಕ್ರಮ ಜರುಗಿಸುವುದು ಸಮಂಜಸವೆಂದು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರು ನೀಡಿರುವ ಅಭಿಪ್ರಾಯದಂತೆ ಪ್ರಸ್ತಾವನೆಯನ್ನು ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ". ಮುಂದುವರೆದು, ಸದರಿ ಭೂ ಉಪಯೋಗ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮತ್ತೊಮ್ಮೆ ದಿನಾಂಕ:10.06.2015ರಂದು ಜರುಗಿದ ಪ್ರಾಧಿಕಾರದ 42ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:42.5.12ರಲ್ಲಿ ವಿಷಯವನ್ನು ಮಂಡಿಸಲಾಗಿದ್ದು, ಮಹಾಯೋಜನೆಯಲ್ಲಿ ಬಿಟ್ಟುಹೋಗಿರುವ ಪ್ರದೇಶವನ್ನು ವ್ಯವಸಾಯ ವಲಯವೆಂದು ಪರಿಗಣಿಸಿ, ಪ್ರಸ್ತಾವನೆಯನ್ನು ಕೆಟಿಸಿಪಿ ಕಾಯ್ದೆ, 1961 ಕಲಂ 14(ಎ)ರಡಿಯಲ್ಲಿ ಮತ್ತು ಮಾರ್ಗಸೂಚಿಗಳಲ್ಲಿನ ಅಂಶಗಳಿಗೆ ಅನುಗುಣವಾಗಿ ಭೂ ಉಪಯೋಗ ಬದಲಾವಣೆಯ ಕೋರಿಕೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ, ಸರ್ಕಾರದ ಆದೇಶ ಸಂ. ನಇ 283 ಮೈಅಪ್ರಾ 2015, ಬೆಂಗಳೂರು ದಿ: 21.07.2015ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಡಮನವರ್ತೆ ಕಾವಲ್ ಗ್ರಾಮದ ಸ.ನಂ:300 ಮತ್ತು 301ರಲ್ಲಿ ಒಟ್ಟು 05 ಎಕರೆ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಪ್ರಾಧಿಕಾರದ ತೀರ್ಮಾನದಂತೆ, **ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139ರ 02ಎಕರೆ ವಿಸ್ತೀರ್ಣದ ಜಮೀನಿಗೆ ಭೂ ಉಪಯೋಗ ಬದಲಾವಣೆ ಕೋರಿರುವ ಪ್ರಸ್ತಾವನೆಯನ್ನು ವ್ಯವಸಾಯ ವಲಯವೆಂದು ಪರಿಗಣಿಸಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.**

ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(2)/ಸಿ.ಆರ್:/275/2017–18, ದಿನಾಂಕ:14/18.09.2017ರಲ್ಲಿ **"ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139ರ ಜಮೀನಿಗೆ ಈ ತಹಲ್ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಬೆಂಗಳೂರು/ವಿಭೂಸ್ವಾಅ–2/2830/2017–18, ದಿನಾಂಕ:27.11.2017ರಲ್ಲಿ **"ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139ರ ಜಮೀನು ಭೂಸ್ವಾಧೀನಪಡಿಸಲು ಅಧಿಸೂಚನೆಯನ್ನು ಹೊರಡಿಸಿರುವುದು ಕಂಡುಬರುತ್ತಿಲ್ಲ "** ಎಂದು ತಿಳಿಸಿರುತ್ತಾರೆ.

ದಿನಾಂಕ:13.07.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ರಸ್ತೆ ಸಂಪರ್ಕವಿದ್ದು, ಪ್ರಸ್ತಾಪಿತ ಜಮೀನಿನಲ್ಲಿ ಎರಡು (02)ವಸತಿ ಕಟ್ಟಡಗಳು ಇರುತ್ತದೆ ಮತ್ತು ಸುತ್ತಮುತ್ತಲೂ ಚದುರಿದಂತೆ ವಸತಿ ಬೆಳವಣಿಗೆಗಳು ಇರುತ್ತವೆ. ಅರ್ಜಿದಾರರು ಈ ಸಂಬಂಧ ಪ್ರಮಾಣ ಪತ್ರ ಸಲ್ಲಿಸಿ, ಪ್ರಸ್ತಾಪಿತ ಜಮೀನಿನಲ್ಲಿ ಇರುವ ಕಟ್ಟಡಗಳನ್ನು ವಿನ್ಯಾಸ ನಕ್ಷೆ ಅನುಮೋದನೆ ಸಮಯದಲ್ಲಿ ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ. ಪ್ರಸ್ತಾವನೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 06.08.2021ರಂದು **"ವಿಜಯವಾಣಿ", ಮತ್ತು "ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್"** ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139ರ 02ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139 ಅನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಪ್ರಾಧಿಕಾರದ ಮಹಾಯೋಜನೆಯಲ್ಲಿ ಗುರುತಿಸಲಾಗಿರುವುದಿಲ್ಲ. ಬಡಮನವರ್ತೆಕಾವಲ್ ಪೂರ್ಣ ಗ್ರಾಮವು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಬಿ.ಎಂ. ಕಾವಲ್ ಗ್ರಾಮದಲ್ಲಿ ಒಟ್ಟು 03 ಠಿಕ್ಕಾಗಳಿದ್ದು, ಈ ವೈಕಿ ಬಿಎಂಐಸಿಎಪಿಎದ ಅನುಮೋದಿತ ಮಹಾಯೋಜನೆಯಲ್ಲಿ ಠಿಕ್ಕಾ–1 ಮಾತ್ರ ಅಳವಡಿಸಲಾಗಿದ್ದು, ಉಳಿದಂತೆ ಠಿಕ್ಕಾ–2 & 3 ಅನುಮೋದಿತ ಮಹಾಯೋಜನೆಯಲ್ಲಿ ಬಿಟ್ಟು ಹೋಗಿರುವುದನ್ನು ಸಭೆಯು ಗಮನಿಸಿತು.

ದಿನಾಂಕ:10.06.2015ರಂದು ಜರುಗಿದ ಪ್ರಾಧಿಕಾರದ 42ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:42.5.12ರಲ್ಲಿನ ತೀರ್ಮಾನದಂತೆ ಮಹಾಯೋಜನೆಯಲ್ಲಿ ಬಿಟ್ಟುಹೋಗಿರುವ ಪ್ರದೇಶವನ್ನು ವ್ಯವಸಾಯ ವಲಯವೆಂದು ಪರಿಗಣಿಸಿ, ಪ್ರಸ್ತಾವನೆಯನ್ನು ಕೆಟಿಸಿಪಿ ಕಾಯ್ದೆ, 1961 ಕಲಂ 14(ಎ)ರಡಿಯಲ್ಲಿ ಮತ್ತು ಮಾರ್ಗಸೂಚಿಗಳಲ್ಲಿನ ಅಂಶಗಳಿಗೆ ಅನುಗುಣವಾಗಿ ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ರಸ್ತೆ ಸಂಪರ್ಕವಿರುವುದರಿಂದ, ಪ್ರಸ್ತಾಪಿತ ಜಮೀನಿನಲ್ಲಿರುವ ಎರಡು (02) ತಾತ್ಕಾಲಿಕ ವಸತಿ ಕಟ್ಟಡಗಳನ್ನು ವಿನ್ಯಾಸ ನಕ್ಷೆ ಅನುಮೋದನೆ ಸಮಯದಲ್ಲಿ ತೆರವುಗೊಳಿಸುವುದಾಗಿ ಅರ್ಜಿದಾರರು ಪ್ರಮಾಣ ಪತ್ರದಲ್ಲಿ ತಿಳಿಸಿರುವುದರಿಂದ ಹಾಗೂ

ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಹೊರಡಿಸಲಾದ ಪತ್ರಿಕಾ ಪ್ರಕಟಣೆಗೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಅರ್ಜಿದಾರರು ಕೋರಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:139ರ 02ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತಗಚಗೆರೆ ಗ್ರಾಮದ ಸರ್ವೆ ಸಂಖ್ಯೆ:223/5ರ 0ಎ–37ಗು ಮತ್ತು ಸರ್ವೆ ಸಂಖ್ಯೆ:223/6ರ 0ಎ–24ಗು ಒಟ್ಟು 01ಎ–21ಗು ಜಮೀನಿನ ಪೈಕಿ 01ಎ–17ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿದಾರರಾದ ಡಾ॥ ಡಿ.ಗಿರಿಸ್ವಾಮಿ ಇವರು ಸಲ್ಲಿಸಿರುವ ಮನವಿ ಕುರಿತು**

*****

ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತಗಚಗೆರೆ ಗ್ರಾಮದ ಸರ್ವೆ ಸಂಖ್ಯೆ:223/5ರ 0ಎ–37ಗು ಮತ್ತು ಸರ್ವೆ ಸಂಖ್ಯೆ:223/6ರ 0ಎ–24ಗು ಒಟ್ಟು 01ಎ–21ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಡಾ॥ ಡಿ.ಗಿರಿಸ್ವಾಮಿ ಇವರು ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ಬಹುಭಾಗ ವ್ಯವಸಾಯ ವಲಯವೆಂದು ಸ್ವಲ್ಪ ಭಾಗ ವಸತಿ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ ಮತ್ತು ಸದರಿ ಜಮೀನಿನಲ್ಲಿ ಉದ್ದೇಶಿತ ರಸ್ತೆಯನ್ನು ಸಹ ಪ್ರಸ್ತಾಪಿಸಲಾಗಿದೆ:

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(2)/ಸಿಆರ್/92/2020–21, ದಿನಾಂಕ:22.03.2021ರಲ್ಲಿ **"ಬಾನಂದೂರು ಗ್ರಾಮದ ವಿವಿಧ ಸರ್ವೆ ಸಂಖ್ಯೆ ಜಮೀನುಗಳಿಗೆ ಅಧಿಸೂಚನೆ ಸಂಖ್ಯೆ:ಸಿಐ/196/ಎಸ್ಪಿಕ್ಯೂ/98, ದಿನಾಂಕ:21.07.1999 ರಂದು ಕೆಐಎಡಿ ಕಾಯ್ದೆ ಕಲಂ 28(1)ರಂತ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ ಈ ತಹಲ್ವರೆವಿಗೂ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಆದಾಗ್ಯೂ, ತಾವು ಕೋರಿರುವ ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತಗಚಗೆರೆ ಗ್ರಾಮದ ಸರ್ವೆ ಸಂಖ್ಯೆ:223/5ರ 0ಎ–37ಗು ಮತ್ತು ಸರ್ವೆ ಸಂಖ್ಯೆ:223/6ರ 0ಎ–24ಗು ಒಟ್ಟು 01ಎ–21ಗು ವಿಸ್ತೀರ್ಣದ ಜಮೀನುಗಳನ್ನು ಈ ತಹಲ್ವರೆವಿಗೂ ಯಾವುದೇ ಭೂಸ್ವಾಧೀನದ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆ.ಐ.ಎ.ಡಿ.ಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್ಎಕ್ಯೂ/514/2021–22, ದಿನಾಂಕ:02.09.2021ರಲ್ಲಿ **"ದಿನಾಂಕ:11.08.2021ರ ಭೂ ಮಾಪಕರ ವರದಿಯಂತೆ ಹಾಗೂ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತಗಚಗೆರೆ ಗ್ರಾಮದ ಸರ್ವೆ ಸಂಖ್ಯೆ:223/5ರ 0ಎ–37ಗು ಮತ್ತು ಸರ್ವೆ ಸಂಖ್ಯೆ:223/6ರ 0ಎ–24ಗು ಒಟ್ಟು 01ಎ–21ಗು ಜಮೀನು ಸರ್ಕಾರದಿಂದ ಹೊರಡಿಸಲಾಗಿರುವ ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 429 ಎಸ್ಪಿಕ್ಯೂ 2009, ದಿನಾಂಕ:26.03.2010ರನ್ವಯ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ"** ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:08.09.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ 6.5ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ ಹಾಗೂ ಜಮೀನಿನ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುತ್ತವೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ28.09.2021ರಂದು "**ವಿಜಯ ಕರ್ನಾಟಕ" ಮತ್ತು** "**ದಿ ಹಿಂದೂ**" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತಗಚಗೆರೆ ಗ್ರಾಮದ ಸರ್ವೆ ಸಂಖ್ಯೆ:223/5ರ 0ಎ–37ಗು ಮತ್ತು ಸರ್ವೆ ಸಂಖ್ಯೆ:223/6ರ 0ಎ–24ಗು ಒಟ್ಟು 01ಎ–21ಗು ಜಮೀನಿನ ಪೈಕಿ ವಸತಿ ವಲಯದಲ್ಲಿ ಕಾಯ್ದಿರಿಸಿರುವ 0ಎ–04ಗು ಪ್ರದೇಶವನ್ನು ಹೊರತುಪಡಿಸಿ, ಉಳಿದ 01ಎ–17ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪರಿಗಣಿಸುವ ಕುರಿತು ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತಗಚಗೆರೆ ಗ್ರಾಮದ ಸರ್ವೆ ಸಂಖ್ಯೆ:223/5ರ 0ಎ–37ಗು ಮತ್ತು ಸರ್ವೆ ಸಂಖ್ಯೆ:223/6ರ 0ಎ–24ಗು ಒಟ್ಟು 01ಎ–21ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ಬಹುಭಾಗ ವ್ಯವಸಾಯ ವಲಯವೆಂದು ಸ್ವಲ್ಪ ಭಾಗ ವಸತಿ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ ಮತ್ತು ಸದರಿ ಜಮೀನಿನಲ್ಲಿ ಉದ್ದೇಶಿತ ರಸ್ತೆಯನ್ನು ಸಹ ಪ್ರಸ್ತಾಪಿಸಲಾಗಿದ್ದು, ಪ್ರಸ್ತಾಪಿತ ಜಮೀನಿಗೆ 6.5ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇರುವುದರಿಂದ ಹಾಗೂ ಜಮೀನಿನ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುವುದರಿಂದ, ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಅರ್ಜಿದಾರರು ಕೋರಿರುವ ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತಗಚಗೆರೆ ಗ್ರಾಮದ ಸರ್ವೆ ಸಂಖ್ಯೆ:223/5ರ 0ಎ–37ಗು ಮತ್ತು ಸರ್ವೆ ಸಂಖ್ಯೆ:223/6ರ 0ಎ–24ಗು ಒಟ್ಟು 01ಎ–21ಗು ಜಮೀನಿನ ಪೈಕಿ ವಸತಿ ವಲಯದಲ್ಲಿ ಕಾಯ್ದಿರಿಸಿರುವ 0ಎ–04ಗು ಪ್ರದೇಶವನ್ನು ಹೊರತುಪಡಿಸಿ, ಉಳಿದ 01ಎ–17ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 318/1ರ 02ಎ–30ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿದಾರರುಗಳಾದ ಶ್ರೀಮತಿ ಕೆಂಪಮ್ಮ ಕೋಂ ಲೇಟ್ ಜವರೇಗೌಡ, ಶ್ರೀಮತಿ ಸವಿತಾ ಕೋಂ ಲೇಟ್ ಜಗದೀಶ್, ಶ್ರೀಮತಿ ನಾಗಮ್ಮ ಬಿನ್ ಲೇಟ್ ಜವರೇಗೌಡ, ಶ್ರೀಮತಿ ಗಾಯಿತ್ರಿ ಬಿನ್ ಲೇಟ್ ಜವರೇಗೌಡ, ಶ್ರೀ ಮಾದೇಶ್ ಬಿನ್ ಲೇಟ್ ಜವರೇಗೌಡ ಇವರುಗಳ ಪರವಾಗಿ ಜಿ.ಪಿ.ಎ ದಾರರಾದ ಶ್ರೀ ಎನ್.ಮಾದೇಗೌಡ ಬಿನ್ ನಿಂಗೇಗೌಡ ರವರು ಸಲ್ಲಿಸಿರುವ ಮನವಿ ಕುರಿತು**

*****

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 318/1ರ 02ಎ–30ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಶ್ರೀ ಎನ್.ಮಾದೇಗೌಡ ಬಿನ್ ನಿಂಗೇಗೌಡ (ಜಿ.ಪಿ.ಎ ದಾರರು) ರವರು ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ ಹಾಗೂ ಅನುಮೋದಿತ ರಸ್ತೆ ಪರಿಚಲನಾ ನಕ್ಷೆಯಂತೆ ಸದರಿ ಜಮೀನಿನ ಪೂರ್ವಕ್ಕೆ 18.0ಮೀ ಅಗಲದ ಮಹಾಯೋಜನೆ ರಸ್ತೆಯನ್ನು ಪ್ರಸ್ತಾಪಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(2)/ಸಿಆರ್/95/2021–22, ದಿನಾಂಕ:16.04.2021ರಲ್ಲಿ **" ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 318/1ರ 02ಎ–30ಗು ವಿಸ್ತೀರ್ಣದ ಜಮೀನಿಗೆ ಈ ತಹಲ್ವರೆವಿಗೂ ಭೂಸ್ವಾಧೀನದ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ವರದಿ ಸಲ್ಲಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಮಂ, ವಲಯ ಕಛೇರಿ, ಮೈಸೂರು ರವರ ಪತ್ರ ಸಂಖ್ಯೆ: ಭೂಸ್ವಾ(2)ಸಿ.ಆರ್/237/2020–21/38, ದಿನಾಂಕ:15.04.2021ರಲ್ಲಿ **"ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 318/1ರಲ್ಲಿ 02ಎ–30ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಗೆ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ"** ಎಂದು ವರದಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:03.04.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದಿಂದ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆಯಾಗಿರುವ ಕೆಸರೆ ಗ್ರಾಮದ ಸರ್ವೆ ಸಂಖ್ಯೆ:318/2, 3ರ 05ಎಕರೆ ವಿಸ್ತೀರ್ಣದ ಬಡಾವಣೆಯ 10.0ಮೀ ಅಗಲದ ರಸ್ತೆಗಳಿಂದ ಸಂಪರ್ಕ ಹೊಂದಿರುತ್ತದೆ. ಪ್ರಸ್ತಾಪಿತ ಜಮೀನಿಗೆ 200ಮೀ ಅಂತರದಲ್ಲಿ ಕೆಸರೆ ಗ್ರಾಮದ ಸರ್ವೆ ಸಂಖ್ಯೆ:278/1,2 ಮತ್ತು ಇತರೆಗಳಲ್ಲಿ ಒಟ್ಟು 43ಎ–33ಗು ವಿಸ್ತೀರ್ಣದ ಜಮೀನಿಗೆ ಪ್ರಾಧಿಕಾರದಿಂದ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆಯಾಗಿ ಕರ್ನಾಟಕ ಗೃಹ ಮಂಡಳಿ ಅಭಿವೃದ್ಧಿಪಡಿಸಿರುವ ಬಡಾವಣೆ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಿರುವ ರಾಜೀವ್‌ನಗರ ವಸತಿ ಬಡಾವಣೆ ಇರುತ್ತದೆ. ಪ್ರಸ್ತಾಪಿತ ಜಮೀನಿನ ಈಶಾನ್ಯ ದಿಕ್ಕಿನಲ್ಲಿ ಅಧಿಕ ವಿದ್ಯುತ್ ವಾಹಕ ಹಾದುಹೋಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ03.09.2021ರಂದು **"ವಿಜಯ ಕರ್ನಾಟಕ" ಮತ್ತು "ದಿ ಹಿಂದು"** ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು.

ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಜಮೀನಿನಲ್ಲಿ ಹಾದು ಹೋಗಿರುವ ಅಧಿಕ ವಿದ್ಯುತ್ ವಾಹಕಕ್ಕೆ ನಿಯಮಾನುಸಾರ ಬಫರ್ ಕಾಯ್ದಿರಿಸುವ ಷರತ್ತಿಗೊಳಪಡಿಸಿ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 318/1ರ 02ಎ–30ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ವಿಷಯವನ್ನು ಪ್ರಾಧಿಕಾರದ ಸಭೆಗೆ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ರಸ್ತೆ ಪರಿಚಲನಾ ನಕ್ಷೆಯಂತೆ ಸದರಿ ಜಮೀನಿನ ಪೂರ್ವಕ್ಕೆ 18.0ಮೀ ಅಗಲದ ಮಹಾಯೋಜನೆ ರಸ್ತೆಯನ್ನು ಪ್ರಸ್ತಾಪಿಸಲಾಗಿರುತ್ತದೆ. ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದಿಂದ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆಯಾಗಿರುವ ಕೆಸರೆ ಗ್ರಾಮದ ಸರ್ವೆ ಸಂಖ್ಯೆ:318/2,3ರ 05ಎಕರೆ ವಿಸ್ತೀರ್ಣದ ಬಡಾವಣೆಯ 10.0ಮೀ ಅಗಲದ ರಸ್ತೆಗಳಿಂದ ಸಂಪರ್ಕ ಇರುತ್ತದೆ ಹಾಗೂ ಪ್ರಸ್ತಾಪಿತ ಜಮೀನಿನ ಸುತ್ತಮುತ್ತಲೂ ವಸತಿ ಬೆಳವಣಿಗೆಗಳು ಬಂದಿರುತ್ತವೆ. ಹಾಗಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿಲ್ಲದಿರುವುದನ್ನು ಮತ್ತು ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಬಹುದಾಗಿರುವುದನ್ನು ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕೆಐಎಡಿಬಿ, ಕೆಐಎಡಿಬಿ(ಬಿಎಂಐಸಿಪಿ)ರವರು ಮಾಹಿತಿ ನೀಡಿರುವುದನ್ನು ಸಭೆಯು ಗಮನಿಸಿತು. ಆದ್ದರಿಂದ ಪ್ರಸ್ತಾಪಿತ ಜಮೀನಿನಲ್ಲಿ ಹಾದುಹೋಗಿರುವ ಅಧಿಕ ವಿದ್ಯುತ್ ವಾಹಕಕ್ಕೆ ನಿಯಮಾನುಸಾರ ಬಫರ್ ಕಾಯ್ದಿರಿಸುವ ಮತ್ತು ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿಸಿರುವ ರಸ್ತೆಯನ್ನು ಯಥಾವತ್ತಾಗಿ ಅಳವಡಿಸುವ ಷರತ್ತಿಗೊಳಪಡಿಸಿ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 318/1ರ 02ಎ–30ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:143/1ರ 01ಎ–22ಗು, 143/2ರ 01ಎ–32ಗು, 145/3ರ 0ಎ–27ಗು, 145/7ರ 0ಎ–18ಗು ಮತ್ತು ಸರ್ವೆ ಸಂಖ್ಯೆ:145/8ರ 0ಎ–30ಗು ಒಟ್ಟು 05ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿದಾರರುಗಳಾದ ಶ್ರೀ ಕೃಷ್ಣ ಬಿನ್ ಪರಸಿದ್ದೇಗೌಡ, ಶ್ರೀಮತಿ ಚಿಕ್ಕಮ್ಮ ಕೋಂ ಜವರೇಗೌಡ, ಶ್ರೀ ಸೈಯದ್ ಮಕ್ಬೂಲ್ ಅಹಮದ್ ಬಿನ್ ಲೇಟ್ ಸೈಯದ್ ಅಬ್ದುಲ್ ರೆಹಮಾನ್ ಮತ್ತು ಇತರರು ಸಲ್ಲಿಸಿರುವ ಮನವಿ ಕುರಿತು**

*****

ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:143/1ರ 01ಎ–22ಗು, 143/2ರ 01ಎ–32ಗು, 145/3ರ 0ಎ–27ಗು, 145/7ರ 0ಎ–18ಗು ಮತ್ತು ಸರ್ವೆ ಸಂಖ್ಯೆ:145/8ರ 0ಎ–30ಗು ಒಟ್ಟು 05ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಶ್ರೀ ಕೃಷ್ಣ ಬಿನ್ ಪರಸಿದ್ದೇಗೌಡ, ಶ್ರೀಮತಿ ಚಿಕ್ಕಮ್ಮ

ಕೋಂ ಜವರೇಗೌಡ, ಶ್ರೀ ಸೈಯದ್ ಮಕ್ಬೂಲ್ ಅಹಮದ್ ಬಿನ್ ಲೇಟ್ ಸೈಯದ್ ಅಬ್ದುಲ್ ರೆಹಮಾನ್ ಮತ್ತು ಇತರರು ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ ಹಾಗೂ ಸರ್ವೆ ಸಂಖ್ಯೆ:143ರ ಪೂರ್ವಕ್ಕೆ 18.0ಮೀ ಅಗಲದ ಮಹಾಯೋಜನೆ ರಸ್ತೆಯನ್ನು ಪ್ರಸ್ತಾಪಿಸಲಾಗಿದೆ. ಸರ್ವೆ ಸಂಖ್ಯೆ:143, 145ರ ಜಮೀನುಗಳಲ್ಲಿ ನಾಲಾ ಹಾದುಹೋಗಿರುವುದನ್ನು ಗಮನಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್‌ಎಕ್ಯೂ(2)/ಸಿಆರ್/91/2020–21, ದಿನಾಂಕ:16.09.2021ರಲ್ಲಿ **"ದಿನಾಂಕ:14.09.2021ರ ಭೂ ಮಾಪಕರ ವರದಿಯಂತೆ ಬಿಎಂಐಸಿ ಯೋಜನೆಗೆ ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:143/1ರ 01ಎ–22ಗು, 143/2ರ 01ಎ–32ಗು, 145/3ರ 0ಎ–27ಗು, 145/7ರ 0ಎ–18ಗು ಮತ್ತು 145/8ರ 0ಎ–30ಗು ಒಟ್ಟು 05ಎ–09ಗು ವಿಸ್ತೀರ್ಣದ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ವರದಿ ಸಲ್ಲಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಮಂ, ವಲಯ ಕಛೇರಿ, ಮೈಸೂರು ರವರ ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/ 50/2021–22/858, ದಿನಾಂಕ:21.10.2021ರಲ್ಲಿ **"ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:143/1ರ 01ಎ–22ಗು, 143/2ರ 01ಎ–32ಗು, 145/3ರ 0ಎ–27ಗು, 145/7ರ 0ಎ–18ಗು ಮತ್ತು ಸರ್ವೆ ಸಂಖ್ಯೆ:145/8ರ 0ಎ–30ಗು ಒಟ್ಟು 05ಎ–09ಗು ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಯಾವುದೇ ಉದ್ದೇಶಕ್ಕೆ ಅಧಿಸೂಚನೆ ಹೊರಡಿಸಿರುವುದು ಕಂಡುಬಂದಿರುವುದಿಲ್ಲ"** ಎಂದು ವರದಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:18.09.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ 12.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಇರುತ್ತದೆ. ಪ್ರಸ್ತಾಪಿತ ಜಮೀನಿಗೆ ಹೊಂದಿಕೊಂಡಂತೆ ಸರ್ವೆ ಸಂಖ್ಯೆ:146/2, 146/8ರ ಒಟ್ಟು 01ಎ–18ಗು ವಿಸ್ತೀರ್ಣದ ವಾಣಿಜ್ಯ(Retail shopping complex/Office complex) ಉದ್ದೇಶಕ್ಕೆ ಹಾಗೂ ಸುಮಾರು 100ಮೀ ಅಂತರದಲ್ಲಿ ಸರ್ವೆ ಸಂಖ್ಯೆ:141/3, 180/1, ಮತ್ತು ಇತರೆ ಸರ್ವೆ ಸಂಖ್ಯೆಗಳಲ್ಲಿನ ಒಟ್ಟು 06ಎ–24ಗು ಮತ್ತು ಸರ್ವೆ ಸಂಖ್ಯೆ:180/3, 180/6 ಮತ್ತು ಇತರೆ ಸರ್ವೆ ಸಂಖ್ಯೆಗಳಲ್ಲಿನ ಒಟ್ಟು 04ಎ–09ಗು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳು ಇರುತ್ತವೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ18.09.2021ರಂದು **"ವಿಜಯ ಕರ್ನಾಟಕ" ಮತ್ತು "ಡೆಕ್ಕನ್ ಹೆರಾಲ್ಡ್"** ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸರ್ವೆ ಸಂಖ್ಯೆ:143 ಮತ್ತು 145ರ ಜಮೀನುಗಳಲ್ಲಿ ಹಾದುಹೋಗಿರುವ ನಾಲಾಗೆ ನಿಯಮಾನುಸಾರ ಬಪರ್ ಕಾಯ್ದಿರಿಸುವ ಹಾಗೂ ಸರ್ವೆ ಸಂಖ್ಯೆ:143ರ ಪೂರ್ವಕ್ಕೆ ಇರುವ 12.0ಮೀ ರಸ್ತೆಯನ್ನು 18.0ಮೀ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಿರುವುದರಿಂದ ಯಥಾವತ್ತಾಗಿ ಅಳವಡಿಸುವ ಷರತ್ತಿಗೊಳಪಡಿಸಿ,

ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:143/1ರ 01ಎ–22ಗು, 143/2ರ 01ಎ–32ಗು, 145/3ರ 0ಎ–27ಗು, 145/7ರ 0ಎ–18ಗು ಮತ್ತು ಸರ್ವೆ ಸಂಖ್ಯೆ:145/8ರ 0ಎ–30ಗು ಒಟ್ಟು 05ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ವಿಷಯ ತೀರ್ಮಾನಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ರಸ್ತೆ ಪರಿಚಲನಾ ನಕ್ಷೆಯಂತೆ ಸರ್ವೆ ಸಂಖ್ಯೆ:143ರ ಪೂರ್ವಕ್ಕೆ 18.0ಮೀ ಅಗಲದ ಮಹಾಯೋಜನೆ ರಸ್ತೆಯನ್ನು ಪ್ರಸ್ತಾಪಿಸಿರುವುದನ್ನು, ಸರ್ವೆ ಸಂಖ್ಯೆ:143, 145ರ ಜಮೀನುಗಳಲ್ಲಿ ನಾಲಾ ಹಾದುಹೋಗಿರುವುದನ್ನು ಸಭೆಯು ಗಮನಿಸಿತು. ಪ್ರಸ್ತಾಪಿತ ಜಮೀನಿಗೆ 12.0ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಇರುವುದರಿಂದ ಹಾಗೂ ಪ್ರಸ್ತಾಪಿತ ಜಮೀನಿನ ಸುತ್ತಮುತ್ತ ವಸತಿ/ವಾಣಿಜ್ಯ ಬೆಳವಣಿಗೆಗಳು ಬಂದಿರುತ್ತವೆ. ಹಾಗಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿಲ್ಲದಿರುವುದನ್ನು ಮತ್ತು ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಬಹುದಾಗಿರುವುದನ್ನು ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕೆಐಎಡಿಬಿ, ಕೆಐಎಡಿಬಿ(ಬಿಎಂಐಸಿಪಿ)ರವರು ಮಾಹಿತಿ ನೀಡಿರುವುದನ್ನು ಸಭೆಯು ಗಮನಿಸಿತು. ಆದ್ದರಿಂದ ಸರ್ವೆ ಸಂಖ್ಯೆ:143, 145ರ ಜಮೀನಿನಲ್ಲಿ ಹಾದುಹೋಗಿರುವ ನಾಲಾಗೆ ನಿಯಮಾನುಸಾರ ಬಫರ್ ಕಾಯ್ದಿರಿಸುವ ಮತ್ತು ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿಸಿರುವ ರಸ್ತೆಯನ್ನು ಯಥಾವತ್ತಾಗಿ ಅಳವಡಿಸುವ ಷರತ್ತಿಗೊಳಪಡಿಸಿ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:143/1ರ 01ಎ–22ಗು, 143/2ರ 01ಎ–32ಗು, 145/3ರ 0ಎ–27ಗು, 145/7ರ 0ಎ–18ಗು ಮತ್ತು ಸರ್ವೆ ಸಂಖ್ಯೆ:145/8ರ 0ಎ–30ಗು ಒಟ್ಟು 05ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

5) **ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/2ರ 0ಎ–04ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿದಾರರಾದ ಶ್ರೀ ಸೈಯದ್ ಮಕ್ಬೂಲ್ ಅಹಮದ್ ಬಿನ್ ಲೇಟ್ ಸೈಯದ್ ಅಬ್ದುಲ್ ರೆಹಮಾನ್ ಇವರು ಸಲ್ಲಿಸಿರುವ ಮನವಿ ಕುರಿತು**

*****

ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/2ರ 0ಎ–04ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಶ್ರೀ ಸೈಯದ್ ಮಕ್ಬೂಲ್ ಅಹಮದ್ ಬಿನ್ ಲೇಟ್ ಸೈಯದ್ ಅಬ್ದುಲ್ ರೆಹಮಾನ್ ಇವರು ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(2)/ಸಿಆರ್/92/2020–21, ದಿನಾಂಕ:16.09.2021ರಲ್ಲಿ **"ದಿನಾಂಕ:14.09.2021ರ ಭೂ ಮಾಪಕರ ವರದಿಯಂತೆ ಬಿಎಂಐಸಿ ಯೋಜನೆಗೆ ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 30ರಲ್ಲಿ 03ಎ–36ಗು ಜಮೀನಿಗೆ ಅಧಿಸೂಚನೆ ಸಂಖ್ಯೆ:ಸಿಐ/196/ಎಸ್ಪಿಕ್ಯೂ/98, ದಿನಾಂಕ:03.07.1999 ರಂದು ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. ತದನಂತರ, ಸರ್ವೆ ಸಂಖ್ಯೆ:30ರಲ್ಲಿ 03ಎ–36ಗು ಜಮೀನಿಗೆ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ:ಸಿಐ/196/ಎಸ್ಪಿಕ್ಯೂ/1998, ದಿನಾಂಕ:11.02.2004ರಂದು ಮೇಲ್ಕಂಡಂತೆ ಹೊರಡಿಸಲಾಗಿದ್ದ ಪ್ರಾಥಮಿಕ ಅಧಿಸೂಚನೆಯ ಭೂಸ್ವಾಧೀನದಿಂದ ಹಿಂತೆಗೆದುಕೊಳ್ಳಲಾಗಿರುತ್ತದೆ ಆಗಾಗಿ ತಾವು ಕೋರಿರುವ 0ಎ–04ಗು ವಿಸ್ತೀರ್ಣವು ಜಮೀನುಗಳಿಗೆ ಇದರಲ್ಲಿ ಒಳಗೊಂಡಿದ್ದು, ಭೂಸ್ವಾಧೀನಕ್ಕೆ ಒಳಪಟ್ಟಿರುವುದಿಲ್ಲ"** ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಮಂ, ವಲಯ ಕಛೇರಿ, ಮೈಸೂರು ರವರು **"ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/2ರ 0ಎ–04ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಗೆ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ"** ಎಂದು ತಿಳಿಸಿರುತ್ತಾರೆ.

ಪ್ರಾಧಿಕಾರದಿಂದ ದಿನಾಂಕ:18.09.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ಇದೇ ಗ್ರಾಮದ ಸರ್ವೆ ಸಂಖ್ಯೆ:28/4 ಮತ್ತು ಇತರೆ ಸರ್ವೆ ಸಂಖ್ಯೆಗಳಲ್ಲಿನ 37ಎ–5¼ಗು ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವ ಬಡಾವಣೆಯ 15.0ಮೀ ಅಗಲದ ರಸ್ತೆಯಿಂದ ಸಂಪರ್ಕ ಇರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವ ಹಿನ್ನಲೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ18.09.2021ರಂದು **"ವಿಜಯ ವಾಣಿ" ಮತ್ತು " ದಿ ಟೈಮ್ಸ್ ಆಫ್ ಇಂಡಿಯಾ"** ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಒಂದು (01) ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ.

ಶ್ರೀಮತಿ ಪ್ರತಿಮ.ಎನ್ ರವರು ದಿನಾಂಕ:27.09.2021ರಂದು ಈ ಕೆಳಕಂಡಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

- As per the reasons mentioned in the notification, the intent is not clear and there is no public interest. The notification says sites are available for Economically weaker section at reasonable rates, while not mentioning the cost factor. Kindly clarify and give the relevant documents. I request the authority to permit me to check the documents submitted by the applicant to the authority.
- Since there is sparse development existing in and around the said land, hence the change of land use will be against law.

The call for objection is an eye wash and the intent of the authority is doubtful and misleading ಎಂದು ಉಲ್ಲೇಖಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾವನೆಗೆ ಸಂಬಂಧಿಸಿದಂತೆ ನಿಗದಿತ ಅವಧಿಯಲ್ಲಿ 01 ಆಕ್ಷೇಪಣೆ ಸ್ವೀಕೃತವಾಗಿರುವ ಕಾರಣ, ಸದರಿ ಆಕ್ಷೇಪಣೆಯನ್ನು ಸಭೆಯ ಅವಗಾಹನೆಗೆ ತರುತ್ತಾ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/2ರ 0ಎ–04ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ

ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ವಿಷಯ ತೀರ್ಮಾನಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಸ್ತಾಪಿತ ಜಮೀನಿಗೆ ಇದೇ ಗ್ರಾಮದ ಸರ್ವೆ ಸಂಖ್ಯೆ:28/4 ಮತ್ತು ಇತರೆ ಸರ್ವೆ ಸಂಖ್ಯೆಗಳಲ್ಲಿನ 37ಎ-05¼ಗು ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವ ಬಡಾವಣೆಯ 15.0ಮೀ ಅಗಲದ ರಸ್ತೆಯಿಂದ ಸಂಪರ್ಕ ಇರುತ್ತದೆ. ಹಾಗಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಸ್ವೀಕೃತವಾಗಿರುವ ಒಂದು (01) ಆಕ್ಷೇಪಣೆಯಲ್ಲಿನ ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಆಕ್ಷೇಪಣೆಯು ಸಮಂಜಸವಾಗಿಲ್ಲದ ಕಾರಣ ಹಾಗೂ ಪ್ರಾಧಿಕಾರದ ಮಹಾಯೋಜನೆ ಪರಿಷ್ಕರಣೆಯಾಗದೇ ಇರುವುದರಿಂದ ಆಕ್ಷೇಪಣೆಯನ್ನು ತಿರಸ್ಕರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಬಹುದಾಗಿರುವುದನ್ನು ಮತ್ತು ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕೆಐಎಡಿಬಿ, ಕೆಐಎಡಿಬಿ(ಬಿಎಂಐಸಿಪಿ)ರವರು ಮಾಹಿತಿ ನೀಡಿರುವುದನ್ನು ಸಭೆಯು ಗಮನಿಸಿತು. ಆದ್ದರಿಂದ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:30/2ರ 0ಎ-04ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

V ಇತರೆ ವಿಷಯಗಳು

1) **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:53/11ರ 01ಎಕರೆ ವಿಸ್ತೀರ್ಣದ ಜಮೀನನ್ನು Educational Institutions (School/College) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ಎಂ.ರಂಗಸ್ವಾಮಿ ಇವರು ಸಲ್ಲಿಸಿರುವ ಆನ್‌ಲೈನ್ ಮನವಿಗೆ ಸಂಬಂಧಿಸಿದಂತೆ ನೀಡಿರುವ ಅಭಿಪ್ರಾಯವನ್ನು ಸ್ಥಿರೀಕರಿಸುವ ಕುರಿತು.**

*****

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಎಂ.ರಂಗಸ್ವಾಮಿ ರವರು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:53/11ರ 01ಎಕರೆ ವಿಸ್ತೀರ್ಣದ ಜಮೀನನ್ನು Educational Institutions (School/College) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ Request ID-268822ರ ಮುಖೇನ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಪ್ರಶ್ನಿತ ಜಮೀನನ್ನು ಒಳಗೊಂಡಂತೆ ಸರ್ವೆ ಸಂಖ್ಯೆ:53/5, 53/6, 53/7, 53/8, 53/9 ಮತ್ತು ಸರ್ವೆ ಸಂಖ್ಯೆ:53/10ರ ಜಮೀನುಗಳಿಗೆ ಹೊಂದಿಕೊಂಡಂತೆ ರಾಷ್ಟ್ರೀಯ ಹೆದ್ದಾರಿ ಇರುವುದಾಗಿ ಮತ್ತು ಸದರಿ ಜಮೀನುಗಳನ್ನು ಒಟ್ಟಾಗಿ ಶೈಕ್ಷಣಿಕ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಲು ಇಚ್ಛಿಸಿರುವುದಾಗಿ ತಿಳಿಸುತ್ತಾ, ಈ ಸಂಬಂಧ ಕೆಲವು ಷರತ್ತುಗಳಿಗೆ ಬದ್ಧರಾಗಿರುವುದಾಗಿ ಮಾಡಿಕೊಂಡಿರುವ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು, ಎಂ.ಆರ್, ಅಲಿನೇಷನ್ ನಕ್ಷೆ ಮತ್ತು ಆರ್.ಟಿ.ಸಿ ಗಳನ್ನು ಅಪ್‌ಲೋಡ್ ಮಾಡಿರುತ್ತಾರೆ. ನಂತರ ಅರ್ಜಿದಾರರು ದಿನಾಂಕ:17.09.2021ರಲ್ಲಿ ಮನವಿ ಸಲ್ಲಿಸಿ, ಪ್ರಸ್ತಾವನೆ ಸಂಬಂಧ ಭೂಮಿ ತಂತ್ರಾಂಶದಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಪ್ಪಾಗಿ ನಮೂದಾಗಿರುವುದಾಗಿ ತಿಳಿಸುತ್ತಾ, ಮನವಿಯೊಂದಿಗೆ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದನಾಯಕನಹಳ್ಳಿ

ಗ್ರಾಮದ ಸರ್ವೆ ಸಂಖ್ಯೆ:53/11ರ 01ಎಕರೆ ವಿಸ್ತೀರ್ಣದ ಜಮೀನನ್ನು ಒಳಗೊಂಡಂತೆ 53/5ರ 0ಎ–07¾ಗು, 53/6ರ 0ಎ–11½ಗು, 53/7ರ 0ಎ–09ಗು, 53/8ರ 0ಎ–09ಗು, 53/9ರ 0ಎ–14½ಗು ಮತ್ತು ಸರ್ವೆ ಸಂಖ್ಯೆ:53/10ರ 01ಎಕರೆ ಒಟ್ಟು 03ಎ–10¾ಗು (ಸಲ್ಲಿಸಿರುವ ಆರ್.ಟಿ.ಸಿ ಯಲ್ಲಿ ನಮೂದಾಗಿರುವ ವಿಸ್ತೀರ್ಣಗಳಂತೆ) ವಿಸ್ತೀರ್ಣದ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಂತೆ ಇದ್ದು, ಸದರಿ ಜಮೀನುಗಳಿಗೆ ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡಿರುವುದಾಗಿ ಮತ್ತು ಸದರಿ ಜಮೀನುಗಳನ್ನು ಶೈಕ್ಷಣಿಕ ಉದ್ದೇಶಕ್ಕೆ ಒಟ್ಟಾರೆಯಾಗಿ ಅಭಿವೃದ್ಧಿಪಡಿಸುವುದಾಗಿ ಕೆಲವು ಷರತ್ತುಗಳಿಗೆ ಒಳಪಟ್ಟು ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು, ಆರ್.ಟಿ.ಸಿ ಮತ್ತು ಎಂ.ಆರ್ ಗಳನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಗೊಂಡ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಪ್ರಸ್ತಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ವ್ಯವಸಾಯ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಜಮೀನಿಗೆ ಕನಿಷ್ಠ 12.0ಮೀ ಅಗಲದ ರಸ್ತೆ ಸಂಪರ್ಕವಿದ್ದಲ್ಲಿ ಮತ್ತು ಜಮೀನಿನ ವಿಸ್ತೀರ್ಣ ಕನಿಷ್ಠ 01 ಹೆಕ್ಟೇರ್ ಗಿಂತ ಹೆಚ್ಚು ಹಾಗೂ 02 ಹೆಕ್ಟೇರ್ ವರೆಗೆ ಇದ್ದಲ್ಲಿ ಗರಿಷ್ಠ 100ಚ.ಮೀ ಉಪಯೋಗಿಸಿಕೊಂಡು School and Library ನಿರ್ಮಿಸಲು ಅವಕಾಶವಿರುತ್ತದೆ.

ದಿನಾಂಕ:04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:V(2)ರಲ್ಲಿ *"ಮಹಾಯೋಜನೆಯ ವಲಯನಿಯಮಾವಳಿಗಳಂತೆ ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಭೂ ಪರಿವರ್ತನೆ ಸಂಬಂಧ ನಿಗಧಿತ ಅವಧಿಯೊಳಗೆ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯ ನೀಡಬೇಕಾಗಿರುವುದರಿಂದ, ಪ್ರಾಧಿಕಾರದ ಮುಂದಿನ ಸಭೆಯ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಭೂ ಪರಿವರ್ತನೆ ಸಂಬಂಧ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯವನ್ನು ನೀಡಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ".*

ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ವ್ಯವಸಾಯ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಜಮೀನಿಗೆ ಕನಿಷ್ಠ 12.0ಮೀ ಅಗಲದ ರಸ್ತೆ ಸಂಪರ್ಕವಿದ್ದಲ್ಲಿ ಮತ್ತು ಜಮೀನಿನ ವಿಸ್ತೀರ್ಣ ಕನಿಷ್ಠ 01 ಹೆಕ್ಟೇರ್ ಗಿಂತ ಹೆಚ್ಚು ಹಾಗೂ 02 ಹೆಕ್ಟೇರ್ ವರೆಗೆ ಇದ್ದಲ್ಲಿ ಗರಿಷ್ಠ 100ಚ.ಮೀ ಉಪಯೋಗಿಸಿಕೊಂಡು School and Library ನಿರ್ಮಿಸಲು ಅವಕಾಶವಿರುವುದರಿಂದ, ಅರ್ಜಿದಾರರು ಸಲ್ಲಿಸಿದ್ದ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರ ಮತ್ತು ಇನ್ನಿತರೆ ದಾಖಲೆಗಳನ್ನು ಆಧರಿಸಿಕೊಂಡು ಸದರಿ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಾಧಿಕಾರದ ಮುಂದಿನ ಸಭೆಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಕೆಲವು ಷರತ್ತುಗಳಿಗೊಳಪಡಿಸಿ, ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:53/11ರ 01ಎಕರೆ ವಿಸ್ತೀರ್ಣದ ಜಮೀನನ್ನು School and Library ಉದ್ದೇಶಕ್ಕೆ ಮಾತ್ರ ಭೂ ಪರಿವರ್ತಿಸುವ ಸಂಬಂಧ ಮುಂದಿನ ಕ್ರಮವಹಿಸಬಹುದೆಂದು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರಿಗೆ ದಿನಾಂಕ:21.09.2021ರಂದು ಆನ್‌ಲೈನ್ ನಲ್ಲಿ ಅಭಿಪ್ರಾಯ ಸಲ್ಲಿಸಲಾಗಿರುತ್ತದೆ.

ಹಾಗಾಗಿ, ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:53/11ರ 01ಎಕರೆ ವಿಸ್ತೀರ್ಣದ ಜಮೀನನ್ನು School and Library ಉದ್ದೇಶಕ್ಕೆ ಭೂ ಪರಿವರ್ತಿಸುವ ಸಂಬಂಧ ಅಭಿಪ್ರಾಯ ಸಲ್ಲಿಸಿರುವ ವಿಷಯವನ್ನು ದಿನಾಂಕ:04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:V(2)ರ ತೀರ್ಮಾನದಂತೆ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:53/11ರ 01ಎಕರೆ ವಿಸ್ತೀರ್ಣದ ಜಮೀನನ್ನು

School and Library ಉದ್ದೇಶಕ್ಕಾಗಿ ಭೂ ಪರಿವರ್ತನೆ ಸಂಬಂಧ ದಿನಾಂಕ:04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:V(2)ರ ತೀರ್ಮಾನದನ್ವಯ ಪ್ರಾಧಿಕಾರದಿಂದ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾಗಿರುವ ಅಂಶವನ್ನು ಸಭೆಯಲ್ಲಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

2) **ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:277/1ರ 01ಎ–06ಗು ಮತ್ತು ಸರ್ವೆ ಸಂಖ್ಯೆ:277/14ರ 02ಎ–09ಗು ಒಟ್ಟು 03ಎ–15ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಶುಲ್ಕ ಪಾವತಿಸುವ ಅವಧಿ ವಿಸ್ತರಿಸಲು ಕೋರಿ ಶ್ರೀ ಎ.ಎಂ.ತೇಜೋಪ್ರಕಾಶ್ ಬಿನ್ ಮಲೇಗೌಡ ರವರು ಸಲ್ಲಿಸಿರುವ ಮನವಿ ಕುರಿತು**

*****

ಶ್ರೀ ಎ.ಎಂ.ತೇಜೋಪ್ರಕಾಶ್ ಬಿನ್ ಮಲೇಗೌಡ ರವರು ದಿನಾಂಕ:14.09.2021ರಂದು ಮನವಿ ಸಲ್ಲಿಸಿ, ಮೇಲ್ಕಾಣಿಸಿದ ವಿವಿಧ ಸರ್ವೆ ಸಂಖ್ಯೆಗಳ ಒಟ್ಟು ವಿಸ್ತೀರ್ಣ 03ಎ–15ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅನುಮತಿ ನೀಡುವ ಸಂಬಂಧ ಈಗಾಗಲೇ ನೀಡಲಾಗಿರುವ ಶುಲ್ಕ ಪಾವತಿ ನೋಟೀಸ್‌ನ ಅವಧಿ ವಿಸ್ತರಿಸಿಕೊಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಈ ಪ್ರಸ್ತಾವನೆಯ ಸಂಬಂಧ ಈ ಕಛೇರಿಯಿಂದ ಶುಲ್ಕ ಪಾವತಿ ನೋಟೀಸ್ ಅನ್ನು ದಿನಾಂಕ:08.04.2021 ರಂದು ಅರ್ಜಿದಾರರಿಗೆ ಜಾರಿ ಮಾಡಲಾಗಿದ್ದು, 90 ದಿನಗಳ ಕಾಲಾವಕಾಶ ನೀಡಲಾಗಿರುತ್ತದೆ. ಆದರೆ, ಅರ್ಜಿದಾರರು ಕರೋನ ಸಮಸ್ಯೆಯಿಂದ ಶುಲ್ಕ ಪಾವತಿಸಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿ ಕಾರಣ ನೀಡಿರುತ್ತಾರೆ. ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ 1965ರ ಕಲಂ 37(ಎ)(2)ರನ್ವಯ ನಿಗಧಿತ ಅವಧಿಯಲ್ಲಿ ಶುಲ್ಕ ಪಾವತಿಸದಿದ್ದಲ್ಲಿ ಅರ್ಜಿದಾರರ ಕೋರಿಕೆಯ ಮೇರೆಗೆ 09 ತಿಂಗಳ ಅವಧಿಗೆ ವಿಸ್ತರಿಸಲು ಪ್ರಾಧಿಕಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಸದರಿ ಅವಕಾಶದಂತೆ ಅರ್ಜಿದಾರರಿಗೆ ಅವಧಿ ವಿಸ್ತರಿಸಿ ಶುಲ್ಕ ಪಾವತಿಸಲು ಸೂಚಿಸಬಹುದಾಗಿದ್ದು, ಪ್ರಾಧಿಕಾರದ ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರಿಗೆ 90 ದಿನಗಳ ಕಾಲಾವಕಾಶ ನೀಡಿ ಶುಲ್ಕ ಪಾವತಿಸಲು ಪ್ರಾಧಿಕಾರದಿಂದ ಶುಲ್ಕ ಪಾವತಿ ಸೂಚನಾ ಪತ್ರ ನೀಡಿರುವುದನ್ನು ಹಾಗೂ ನಿಗಧಿತ ಅವಧಿಯಲ್ಲಿ ಅರ್ಜಿದಾರರು ಶುಲ್ಕ ಪಾವತಿಸದೇ, ದಿನಾಂಕ:12.09.2021ರಂದು ಮನವಿ ಸಲ್ಲಿಸಿ, ಶುಲ್ಕ ಪಾವತಿಸಲು ಕಾಲಾವಕಾಶ ನೀಡಲು ಕೋರಿರುವುದನ್ನು ಸಭೆಯು ಗಮನಿಸಿ, ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ ನಿಯಮ 37ಎ(2)ರನ್ವಯ ಶುಲ್ಕ ಪಾವತಿಸಲು ನಿಗಧಿಪಡಿಸಲಾಗಿದ್ದ ಅವಧಿಯನ್ನು ದಿನಾಂಕ:06.07.2021 ರಿಂದ 09 ತಿಂಗಳವರೆಗೆ ಕಾಲಾವಕಾಶ ನೀಡಿ, ಅರ್ಜಿದಾರರಿಂದ ಶುಲ್ಕ ಪಾವತಿಸಿಕೊಂಡು ಮುಂದಿನ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಪೀ ಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:120/1ರ 01ಎ–18¾ಗು ಪೈಕಿ 01ಎ–12¼ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಹೋಟೆಲ್ ಮತ್ತು ವಸತಿ ಗೃಹ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ತಡವಾಗಿ ಶುಲ್ಕ ಪಾವತಿಸಿ, ಶುಲ್ಕ ಪಾವತಿ ಅವಧಿ ವಿಸ್ತರಿಸಲು ಕೋರಿ ಶ್ರೀ ಶಂಕರ ನಾರಾಯಣ ಬಿನ್ ಸಿದ್ದಯ್ಯ ರವರು ಸಲ್ಲಿಸಿರುವ ಮನವಿ ಕುರಿತು**

*****

ಶ್ರೀ ಶಂಕರ ನಾರಾಯಣ ಬಿನ್ ಸಿದ್ದಯ್ಯ ರವರು ದಿನಾಂಕ:22.09.2021ರಂದು ಮನವಿ ಸಲ್ಲಿಸಿ, ಮೇಲ್ಕಾಣಿಸಿದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಹೋಟೆಲ್ ಮತ್ತು ವಸತಿ ಗೃಹ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅನುಮತಿ ನೀಡುವ ಸಂಬಂಧ ದಿನಾಂಕ:17.12.2020ರಂದು ಈ ಕಛೇರಿಯಿಂದ

ನೀಡಲಾಗಿದ್ದ ಶುಲ್ಕ ಪಾವತಿ ನೋಟೀಸ್‌ನ ಕಾಲಾವಧಿ ಮೀರಿದ ನಂತರ ಶುಲ್ಕ ಪಾವತಿಸಿ, ನೋಟೀಸ್‌ನ ಕಾಲಾವಧಿ ವಿಸ್ತರಿಸಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಈ ಪ್ರಸ್ತಾವನೆಯ ಸಂಬಂಧ ಈ ಕಛೇರಿಯಿಂದ ಶುಲ್ಕ ಪಾವತಿ ನೋಟೀಸ್ ಅನ್ನು ದಿನಾಂಕ:17.12.2020 ರಂದು ಅರ್ಜಿದಾರರಿಗೆ ಜಾರಿ ಮಾಡಲಾಗಿದ್ದು, 90 ದಿನಗಳ ಕಾಲಾವಕಾಶ ನೀಡಲಾಗಿರುತ್ತದೆ. ಆದರೆ, ಅರ್ಜಿದಾರರು ಕರೋನ ಲಾಕ್‌ಡೌನ್ ಕಾರಣದಿಂದ ಆರ್ಥಿಕ ಸಂಕಷ್ಟ ಆಗಿದ್ದರಿಂದ ನಿಗಧಿತ ಅವಧಿಯೊಳಗೆ ಶುಲ್ಕ ಪಾವತಿಸಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿ ಕಾರಣ ನೀಡಿ, ತಡವಾಗಿ ಶುಲ್ಕ ಪಾವತಿಸಿರುತ್ತಾರೆ. ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ 1965ರ ಕಲಂ 37(ಎ)(2)ರನ್ವಯ ನಿಗಧಿತ ಅವಧಿಯಲ್ಲಿ ಶುಲ್ಕ ಪಾವತಿಸದಿದ್ದಲ್ಲಿ ಅರ್ಜಿದಾರರ ಕೋರಿಕೆಯ ಮೇರೆಗೆ 09 ತಿಂಗಳ ಅವಧಿಗೆ ವಿಸ್ತರಿಸಲು ಪ್ರಾಧಿಕಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಸದರಿ ಅವಕಾಶದಂತೆ ಈಗಾಗಲೇ ಅರ್ಜಿದಾರರು ಶುಲ್ಕ ಪಾವತಿಸಿರುವುದರಿಂದ, ಶುಲ್ಕ ಪಾವತಿ ಅವಧಿ ವಿಸ್ತರಿಸಬಹುದಾಗಿದ್ದು, ಪ್ರಾಧಿಕಾರದ ಸಭೆಯ ನಿರ್ಣಯಕ್ಕೆ ಮಂಡಿಸಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರಿಗೆ 90 ದಿನಗಳ ಕಾಲಾವಕಾಶ ನೀಡಿ ಶುಲ್ಕ ಪಾವತಿಸಲು ಪ್ರಾಧಿಕಾರದಿಂದ ಶುಲ್ಕ ಪಾವತಿ ಸೂಚನಾ ಪತ್ರ ನೀಡಿರುವುದನ್ನು ಹಾಗೂ ನಿಗಧಿತ ಅವಧಿಯಲ್ಲಿ ಅರ್ಜಿದಾರರು ಶುಲ್ಕ ಪಾವತಿಸದೇ, ಅವಧಿ ಮುಗಿದ ನಂತರ ದಿನಾಂಕ:22.09.2021ರಂದು ಶುಲ್ಕ ಪಾವತಿಸಿರುವುದರಿಂದ, ಶುಲ್ಕ ಪಾವತಿಸಲು ನೀಡಿರುವ ಕಾಲಾವಕಾಶವನ್ನು ವಿಸ್ತರಿಸಲು ಕೋರಿರುವುದನ್ನು ಸಭೆಯು ಗಮನಿಸಿ, ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ ನಿಯಮ 37ಎ(2)ರನ್ವಯ ದಿನಾಂಕ:16.03.2021 ರಿಂದ 09 ತಿಂಗಳವರೆಗೆ ಕಾಲಾವಕಾಶ ವಿಸ್ತರಿಸಿ ಈಗಾಗಲೇ ಅರ್ಜಿದಾರರು ಶುಲ್ಕ ಪಾವತಿಸಿರುವುದರಿಂದ, ಪ್ರಾಧಿಕಾರದಿಂದ ಮುಂದಿನ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:28 ಮತ್ತು 51ರಲ್ಲಿನ ಒಟ್ಟು 18ಎ-34ಗು ವಿಸ್ತೀರ್ಣದ ಜಮೀನಿಗೆ ನೀಡಿರುವ ವಸತಿ ವಿನ್ಯಾಸದ ಕುರಿತು.

******

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:28 ಮತ್ತು 51ರಲ್ಲಿನ ಒಟ್ಟು 18ಎ-34ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಕೆಲವೊಂದು ಷರತ್ತಿಗೊಳಪಡಿಸಿ ದಿನಾಂಕ:23.02.2004ರಂದು ಮಂಜೂರಾತಿ ನೀಡಲಾಗಿದೆ.

ಪ್ರಾಧಿಕಾರದಿಂದ ನೀಡಲಾಗಿರುವ ಮಂಜೂರಾತಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸದೇ ಅರ್ಜಿದಾರರು ಉಲ್ಲಂಘನೆ ಮಾಡಿದ್ದು, ಸದರಿ ವಿನ್ಯಾಸವನ್ನು ರದ್ದುಪಡಿಸುವಂತೆ ಶ್ರೀ ಫಕೃದ್ದೀನ್ ಬಿನ್ ಅಬ್ದುಲ್ ರಹೀಂ ಮದ್ದೂರ ರವರು ದಿನಾಂಕ:09.10.2017ರಲ್ಲಿ ಮತ್ತು ಇತರೆ ದಿನಾಂಕಗಳಲ್ಲಿ ಪ್ರಾಧಿಕಾರಕ್ಕೆ ದೂರು ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ ಫಕೃದ್ದೀನ್ ಮದ್ದೂರ ರವರು ಸಲ್ಲಿಸಿರುವ ದೂರಿಗೆ ಸಂಬಂಧಿಸದಂತೆ ವಿನ್ಯಾಸದ ಮಂಜೂರಾತಿ ಆದೇಶದಲ್ಲಿ ವಿಧಿಸಿರುವ ನಿಬಂಧನೆ ಸಂಖ್ಯೆ:2, 4, 5 ಮತ್ತು 6ನ್ನು ಪೂರೈಸಿ ವಿನ್ಯಾಸ ನಕ್ಷೆಯನ್ನು ಕಾರ್ಯಗತಗೊಳಿಸಿರುವ ಕುರಿತು ಸಮಗ್ರ ಮಾಹಿತಿ/ದಾಖಲಾತಿಗಳನ್ನು ನೀಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ರವರಿಗೆ ಪ್ರಾಧಿಕಾರದ ದಿನಾಂಕ:31.10.2017ರ ಪತ್ರದಲ್ಲಿ ತಿಳಿಸಲಾಗಿತ್ತು ಹಾಗೂ ದಿನಾಂಕ:18.12.2017ರಲ್ಲಿ ನೆನಪೋಲೆ ಸಹ ಬರೆಯಲಾಗಿತ್ತು. ಈ ಸಂಬಂಧ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ರವರು ದಿ: 22.02.2018ರ ಪತ್ರದಲ್ಲಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:28 ಮತ್ತು 51ರಲ್ಲಿ ಒಟ್ಟು 18ಎ-34ಗು ಜಮೀನು ವಸತಿ ಬಡಾವಣೆಯನ್ನಾಗಿ ಮೆಗಾ ಸಿಟಿ ಡೆವಲಪರ್ಸ್ ಮತ್ತು ಬಿಲ್ಡರ್ಸ್ ರವರು ಈ ಹಿಂದೆ ನಿರ್ಮಿಸಿದ್ದು, ಈಗ ಇದರ ಸ್ಥಳ

ಮಹಜರ್ ಮಾಡಲಾಗಿ, ಸದರಿ ಸರ್ವೆ ನಂಬರಿನ ಜಾಗದಲ್ಲಿ ಪೂರ್ಣ ಪ್ರಮಾಣದ ಬಡಾವಣೆ ನಿರ್ಮಾಣಗೊಂಡಿರುವುದಿಲ್ಲ ಹಾಗೂ ಈ ಬಡಾವಣೆಯ ನಕ್ಷೆಗಳು ನಮ್ಮ ಪಂಚಾಯಿತಿ ಕಛೇರಿಯಲ್ಲಿ ಲಭ್ಯವಿರುವುದಿಲ್ಲ ಎಂಬ ಅಂಶಗಳನ್ನು ಪ್ರಾಧಿಕಾರದ ಅವಗಾಹನೆಗೆ ಸಲ್ಲಿಸಿರುತ್ತಾರೆ. ಆದ್ದರಿಂದ, ಪ್ರಾಧಿಕಾರದ ದಿನಾಂಕ:24.03.2018ರ ಪತ್ರದಲ್ಲಿ, ಸದರಿ ಬಡಾವಣೆಯಲ್ಲಿ ಎಷ್ಟು ನಿವೇಶನಗಳಿಗೆ ಖಾತೆ ತೆರೆಯಲಾಗಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ/ದಾಖಲಾತಿಗಳನ್ನು ನೀಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರಿಗೆ ತಿಳಿಸಲಾಗಿತ್ತು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದಿನಾಂಕ:17.07.2018ರ ಪತ್ರದೊಂದಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:28 ಮತ್ತು 51ರಲ್ಲಿನ ಒಟ್ಟು 18ಎ–34ಗು ಜಮೀನಿಗೆ ಗ್ರಾಮ ಪಂಚಾಯಿತಿಯಲ್ಲಿ ಮಾಡಿರುವ ಖಾತೆ ವಿವರಗಳ/ ದಾಖಲಾತಿಗಳನ್ನು ಲಗತ್ತಿಸಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ರವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಪ್ರಾಧಿಕಾರದಿಂದ ದಿನಾಂಕ:23.02.2004 ರಂದು ನೀಡಿರುವ ಆದೇಶದಂತೆ ಒಟ್ಟು 239 ವಿವಿಧ ಅಳತೆಯ ವಸತಿ ನಿವೇಶನಗಳಿಗೆ ಮಂಜೂರಾತಿ ನೀಡಲಾಗಿದ್ದು, ಆದರೆ ಗ್ರಾಮ ಪಂಚಾಯಿತಿಯವರು ಮಂಜೂರಾತಿ ಆದೇಶದಲ್ಲಿನ ನಿಬಂಧನೆ–2, 4 ಮತ್ತು 6ರಂತೆ ಕ್ರಮವಹಿಸದೆ ಒಟ್ಟು 331 ವಸತಿ ನಿವೇಶನಗಳಿಗೆ ಖಾತೆ ಮಾಡಿರುವುದನ್ನು ಗಮನಿಸಲಾಗಿದೆ.

ಪ್ರಾಧಿಕಾರದಿಂದ ನೀಡಿರುವ ವಸತಿ ವಿನ್ಯಾಸ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಹೆಚ್ಚುವರಿಯಾಗಿ ವಸತಿ ನಿವೇಶನಗಳನ್ನು ರಚಿಸಿ, ಸದರಿ ನಿವೇಶನಗಳಿಗೆ ಅನಧಿಕೃತವಾಗಿ ಖಾತೆ ತೆರೆದಿರುವುದರಿಂದ, ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೆ.ಗೊಲ್ಲಹಳ್ಳಿ ರವರಿಗೆ ಸದರಿ ಬಡಾವಣೆಯಲ್ಲಿನ ಅನಧಿಕೃತ ಎಲ್ಲಾ ಖಾತೆಗಳನ್ನು ಕೂಡಲೇ ರದ್ದುಪಡಿಸುವಂತೆ ಸೂಕ್ತ ನಿರ್ದೇಶನ ನೀಡುವಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಬೆಂಗಳೂರು ದಕ್ಷಿಣ ತಾಲ್ಲೂಕು ರವರನ್ನು ದಿನಾಂಕ:18.08.2018ರ ಈ ಕಛೇರಿ ಪತ್ರದಲ್ಲಿ ಕೋರಲಾಗಿರುತ್ತದೆ ಹಾಗೂ ಪ್ರತಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ರವರಿಗೆ ಕಳುಹಿಸಲಾಗಿದ್ದು, ದಿನಾಂಕ:04.12.2019, 04.07.2020ರಂದು ನೆನಪೋಲೆ ಹಾಗೂ 05.05.2020, 19.09.2020ರಂದು ಪತ್ರಗಳನ್ನು ಸಹ ಬರೆಯಲಾಗಿರುತ್ತದೆ.

ಶ್ರೀ ಫಕೃದ್ದೀನ್ ಮದ್ಲೂರ ರವರು ದಿ: 05.08.2020ರಂದು ಮನವಿ ಸಲ್ಲಿಸಿ, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ರವರಿಗೆ ನಿಗಧಿತ ಅವಧಿಯನ್ನು ವಿಧಿಸಿ ಮಾಹಿತಿ/ದಾಖಲೆಗಳನ್ನು ನೀಡಲು ಕೊನೆಯ ಅವಕಾಶವನ್ನು ನೀಡಿ, ಒಂದು ವೇಳೆ ನಿಗಧಿತ ಅವಧಿಯಲ್ಲಿ ಸದರಿ ಅವರು ಮಾಹಿತಿ / ದಾಖಲೆಗಳನ್ನು ಪೂರೈಸದಿದ್ದಲ್ಲಿ ಅಭಿವೃದ್ಧಿದಾರರ ವಿರುದ್ಧ ಕಾನೂನಿನ ಕ್ರಮ ಜರುಗಿಸಲು ಹಾಗೂ ನಿವೇಶನ ಖರೀದಿದಾರರಿಗೆ ಸ್ವಾಭಾವಿಕ ನ್ಯಾಯ ನೀಡಲು ವಿನಂತಿಸಿದ್ದು, ಈ ಸಂಬಂಧ ಪ್ರಾಧಿಕಾರದ ದಿ: 19.09.2020ರ ಪತ್ರದಲ್ಲಿ, ಕೋರಿರುವ ಮಾಹಿತಿಯನ್ನು ಒದಗಿಸುವಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ರವರಿಗೆ ಪತ್ರ ಬರೆಯಲಾಗಿರುತ್ತದೆ.

ಈ ಮಧ್ಯೆ, ಸರ್ಕಾರದ ದಿ:18.11.2020ರ ಪತ್ರದಲ್ಲಿ, ಸಾರ್ವಜನಿಕರಿಂದ ಸ್ವೀಕೃತಿಯಾಗಿರುವ ದೂರು/ಮನವಿಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮತೆಗೆದುಕೊಳ್ಳುವಂತೆ ಹಾಗೂ ಸರ್ಕಾರದ ಅನುಮೋದನೆ ಅಗತ್ಯವಿದ್ದಲ್ಲಿ ಮೂಲ ಮನವಿಗಳೊಂದಿಗೆ ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿದೆ. ಈ ಸಂಬಂಧ ಪ್ರಾಧಿಕಾರದ ದಿ: 17.12.2020ರ ಪತ್ರದಲ್ಲಿ, ಶ್ರೀ ಫಕೃದ್ದೀನ್ ಮದ್ಲೂರ ರವರು ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಪ್ರಾಧಿಕಾರವು ತೆಗೆದುಕೊಂಡಿರುವ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ.

ಶ್ರೀ ಫಕೃದ್ದೀನ್ ಮದ್ಲೂರ ರವರು ದಿನಾಂಕ:10.05.2021ರಂದು ಪತ್ರ ಸಲ್ಲಿಸಿ, ಪ್ರಾಧಿಕಾರದಿಂದ ನೀಡಿರುವ ವಿನ್ಯಾಸವನ್ನು ರದ್ದುಗೊಳಿಸಿ, ಸಾರ್ವಜನಿಕರು/ನಿವೇಶನ ಖರೀದಿದಾರರಿಗೆ ಮಾಹಿತಿಗಾಗಿ ದಿನಪತ್ರಿಕೆಯಲ್ಲಿ ಪ್ರಕಟಣೆಯನ್ನು ನೀಡಿ, ಅಭಿವೃದ್ಧಿದಾರರು ವಿರುದ್ಧ ಕ್ರಿಮಿನಲ್ ದಾವೆಯನ್ನು ಹೂಡಿ ಕಾನೂನು ಕ್ರಮಜರುಗಿಸಲು ಹಾಗೂ ನಿವೇಶನ ಖರೀದಿದಾರರಿಗೆ ಸ್ವಾಭಾವಿಕ ನ್ಯಾಯ ನೀಡುವಂತೆ ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ರವರ ದಿನಾಂಕ:15.03.2021 ಮತ್ತು 20.04.2021ರ ಪತ್ರಗಳಲ್ಲಿ ಪ್ರಸ್ತಾಪಿತ ವಿನ್ಯಾಸದಲ್ಲಿನ ಎಲ್ಲಾ ಖಾತೆಗಳನ್ನು ವಜಾಗೊಳಿಸಿರುವ ಬಗ್ಗೆ ಮಾಹಿತಿ ನೀಡಿರುವ ಪತ್ರಗಳ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ. ಈ ಸಂಬಂಧ ಪ್ರಾಧಿಕಾರದ ದಿ:22.06.2021ರ ಪತ್ರದಲ್ಲಿ ಪ್ರಸ್ತಾಪಿತ ವಿನ್ಯಾಸದಲ್ಲಿನ ನಿವೇಶನಗಳಿಗೆ ಪಂಚಾಯಿತಿಯಿಂದ ವಿತರಿಸಿರುವ ಎಲ್ಲಾ ಖಾತೆಗಳನ್ನು ರದ್ದು ಮಾಡಿರುವ ಬಗ್ಗೆ ವಿವರವಾದ ವರದಿಯನ್ನು ಪ್ರಾಧಿಕಾರಕ್ಕೆ ನೀಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ರವರಿಗೆ ತಿಳಿಸಲಾಗಿತ್ತು. ಅದರಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ರವರ ದಿನಾಂಕ:13.07.2021ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:28 ಮತ್ತು 51ರಲ್ಲಿನ ಒಟ್ಟು 18ಎ–34ಗು ವಿಸ್ತೀರ್ಣದ ಜಮೀನಿನಲ್ಲಿ ವಿಂಗಡಿಸಿರುವ ನಿವೇಶನಗಳಿಗೆ ಖಾತೆಗಳನ್ನು ವಜಾ ಮಾಡಲು ಪಂಚಾಯಿತಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ ಎಂದು ತಿಳಿಸಿ, ಅದರಂತೆ ಖಾತೆಗಳನ್ನು ವಜಾಮಾಡಲಾಗಿದೆ ಎಂದು ವರದಿಯನ್ನು ನೀಡಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:28 ಮತ್ತು 51ರಲ್ಲಿನ ಒಟ್ಟು 18ಎ–34ಗು ವಿಸ್ತೀರ್ಣದ ಜಮೀನಿಗೆ ಪ್ರಾಧಿಕಾರದಿಂದ ದಿನಾಂಕ:23.02.2004ರಂದು ಅನುಮೋದನೆ ನೀಡಿ, ಸುಮಾರು 17 ವರ್ಷ ಪೂರ್ಣಗೊಂಡಿದ್ದು, ಪ್ರಾಧಿಕಾರದಿಂದ ನೀಡಿರುವ ಅನುಮೋದನೆಯಂತೆ ವಿನ್ಯಾಸವನ್ನು ಅಭಿವೃದ್ಧಿಪಡಿಸಿ, ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ ಪತ್ರ ಪಡೆದು, ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನಗಳು ಮತ್ತು ಸಿ.ಎ ನಿವೇಶನವನ್ನು ಹಸ್ತಾಂತರಿಸಿಕೊಂಡು ಖಾತೆ ತೆರೆದಿರುವ ಬಗ್ಗೆ ಯಾವುದೇ ಮಾಹಿತಿಯನ್ನು ಗ್ರಾಮ ಪಂಚಾಯಿತಿಯಿಂದ ನೀಡಿಲ್ಲದಿರುವುದನ್ನು ಸಭೆಯು ಗಮನಿಸಿತು.

ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿ 239 ನಿವೇಶನಗಳಿರುವುದನ್ನು ಹಾಗೂ ಗ್ರಾಮ ಪಂಚಾಯಿತಿಯಿಂದ 331 ನಿವೇಶನಗಳಿಗೆ ಖಾತೆ ತೆರೆದಿರುವುದನ್ನು ಸಭೆಯು ಗಮನಿಸುವುದರ ಜೊತೆಗೆ, ದೂರುದಾರರಾದ ಶ್ರೀ ಫಕೃದ್ದೀನ್ ಮದ್ಲೂರು ರವರು ಮನವಿಯಲ್ಲಿ ಪ್ರಾಧಿಕಾರದಿಂದ ನೀಡಿರುವ ವಿನ್ಯಾಸವನ್ನು ರದ್ದುಗೊಳಿಸಲು ಹಾಗೂ ನಿವೇಶನದಾರರಿಗೆ ಸ್ವಾಭಾವಿಕ ನ್ಯಾಯ ನೀಡಲು ಕೋರಲಾಗಿದ್ದು, ಈ ಸಂಬಂಧ ಅನೇಕ ಬಾರಿ ಪ್ರಾಧಿಕಾರದಿಂದ ಅನಧಿಕೃತವಾಗಿ ತೆರೆದಿರುವ ಖಾತೆಗಳನ್ನು ರದ್ದುಪಡಿಸಲು ಗ್ರಾಮಪಂಚಾಯಿತಿಗೆ ಹಾಗೂ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ರವರ ಗಮನಕ್ಕೆ ತಂದ ನಂತರ, ದಿನಾಂಕ:13.07.2021ರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪತ್ರದಲ್ಲಿ ಸದರಿ ವಿನ್ಯಾಸದಲ್ಲಿನ ಖಾತೆಗಳನ್ನು ವಜಾ ಮಾಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿ, ಗ್ರಾಮ ಪಂಚಾಯಿತಿ ಸಭೆಯ ನಡವಳಿಯ ಪ್ರತಿಯನ್ನು ಲಗತ್ತಿಸಿದ ಅಂಶವನ್ನು ಸಹ ಸಭೆಯು ಗಮನಿಸಿತು.

ಈ ಮೇಲಿನ ಎಲ್ಲಾ ಅಂಶಗಳ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾಪಿತ ವಿನ್ಯಾಸವನ್ನು ಪ್ರಾಧಿಕಾರದ ಅನುಮೋದನೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವ ಬಗ್ಗೆ ಹಾಗೂ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು, ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ

ನಿವೇಶನಗಳನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿಕೊಂಡು ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ವಿನ್ಯಾಸದಲ್ಲಿನ ನಿವೇಶನಗಳಿಗೆ ಖಾತೆ ತೆರೆಯಲಾಗಿದೆಯೇ ಎಂಬ ಬಗ್ಗೆ ಹಾಗೂ ಗ್ರಾಮ ಪಂಚಾಯಿತಿಯ ದಿನಾಂಕ:08.03.2021ರ ನಡವಳಿಯ ಮೇಲೆ ಗ್ರಾಮ ಪಂಚಾಯಿತಿಯಿಂದ ತೆಗೆದುಕೊಂಡಿರುವ ಕ್ರಮದ ಬಗ್ಗೆ ಸಂಪೂರ್ಣ ವರದಿಯನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ರವರಿಂದ ಪಡೆದು, ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

5) **ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ (ಸಿ.ಎ) ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ (ಸಿ.ಎ) ನಿವೇಶನಗಳನ್ನು ಹಂಚಿಕೆ ಮಾಡುವ ವಿಷಯವನ್ನು ದಿನಾಂಕ:18.03.2021ರಂದು ಜರುಗಿದ ಪ್ರಾಧಿಕಾರದ 68ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:VI(1) ರಲ್ಲಿ ವಿಷಯವನ್ನು ಮಂಡಿಸಲಾಗಿ, ಸಭೆಯು ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

"ಸರ್ಕಾರದ ಅಧಿಸೂಚನೆ ಸಂಖ್ಯೆ:UDD 27 TTP 2016, ದಿನಾಂಕ:24.05.2017ರಂತೆ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಕೇಂದ್ರ, ರಾಜ್ಯ ಸರ್ಕಾರಿ ಇಲಾಖೆಗಳಿಗೆ, ಸ್ಥಳೀಯ ಸಂಸ್ಥೆ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಪತ್ರಿಕಾ ಪ್ರಕಟಣೆ ಹೊರಡಿಸಲು ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಪ್ರಾಧಿಕಾರದ ಸಭೆಯ ತೀರ್ಮಾನದಂತೆ ದಿನಾಂಕ:22.06.2021ರಂದು ಕನ್ನಡ ಪ್ರಭ, ವಾರ್ತಾ ಭಾರತಿ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿ ಯಾವುದಾದರೂ ಕೇಂದ್ರ, ರಾಜ್ಯ ಸರ್ಕಾರಿ ಇಲಾಖೆಗಳಿಗೆ, ಸ್ಥಳೀಯ ಸಂಸ್ಥೆ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ನಾಗರೀಕ ಸೌಲಭ್ಯ ನಿವೇಶನಗಳು ಅವಶ್ಯಕತೆ ಇದ್ದಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿ 30 ದಿನಗಳೊಳಗಾಗಿ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಗಿತ್ತು ಮತ್ತು ಪ್ರಾಧಿಕಾರದ ದಿನಾಂಕ:05.07.2021ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ, ರಾಮನಗರ, ಮಂಡ್ಯ, ಮೈಸೂರು ಜಿಲ್ಲೆ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಬೆಂಗಳೂರು ನಗರ, ರಾಮನಗರ, ಮಂಡ್ಯ, ಮೈಸೂರು ಜಿಲ್ಲೆ ರವರುಗಳಿಗೆ ನಾಗರೀಕ ಸೌಲಭ್ಯ ನಿವೇಶನಗಳು ಅವಶ್ಯಕತೆ ಇದ್ದಲ್ಲಿ 30ದಿನಗಳೊಳಗಾಗಿ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಗಿತ್ತು.

ಆದರೆ, ಈವರೆವಿಗೂ ಪ್ರಾಧಿಕಾರದಲ್ಲಿ ಲಭ್ಯವಿರುವ ಸಿ.ಎ ನಿವೇಶನಗಳನ್ನು ಹಂಚಿಕೆ ಕೋರಿ ಯಾವುದೇ ಕೇಂದ್ರ, ರಾಜ್ಯ ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಂದ ಪ್ರಸ್ತಾವನೆಗಳು ಸ್ವೀಕರಿಸಲಾಗಿರುವುದಿಲ್ಲ. ಆದ್ದರಿಂದ, ಪ್ರಾಧಿಕಾರದಲ್ಲಿ ಲಭ್ಯವಿರುವ ಸಿ.ಎ. ನಿವೇಶನಗಳನ್ನು ಖಾಸಗಿ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಲ್ಲಿ ಲಭ್ಯವಿರುವ ಸಿ.ಎ ನಿವೇಶನಗಳ ಹಂಚಿಕೆ ಕೋರಿ ಯಾವುದೇ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಇಲಾಖೆಗಳಿಂದ, ಸ್ಥಳೀಯ ಸಂಸ್ಥೆ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಂದ ಪ್ರಸ್ತಾವನೆಗಳು ಸ್ವೀಕೃತವಾಗದಿರುವ ಅಂಶಗಳನ್ನು ಸಭೆಯು ಗಮನಿಸಿ, ಪ್ರಾಧಿಕಾರದಲ್ಲಿ ಲಭ್ಯವಿರುವ ಸಿ.ಎ ನಿವೇಶನಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:UDD 27 TTP 2016, ದಿನಾಂಕ:24.05.2017ರಂತೆ ನೊಂದಾಯಿತ ಖಾಸಗಿ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಸಂಬಂಧ ಮುಂದಿನ ಕ್ರಮಜರುಗಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

6) **ಕೆರೆ ಮತ್ತು ನಾಲಾಗಳ ಬಫರ್‌ಗಳಲ್ಲಿ ರಸ್ತೆಯನ್ನು ಅಭಿವೃದ್ಧಿಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿನ ವಲಯ ನಿಯಮಾವಳಿಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: UDD 15 TTP 2015, ದಿನಾಂಕ:21.04.2020ರಲ್ಲಿ ತಿದ್ದುಪಡಿ ಮಾಡಿ ನದಿ ಮತ್ತು ನೀರಿನ ಮೂಲಗಳ ಬಫರ್‌ಗಳಲ್ಲಿ ಈ ಕೆಳಕಂಡ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

1. Water Pumping Stations
2. Walking tracks
3. Play fields without any building construction
4. Cycling tracks and
5. Parks

ಆದರೆ, ಸದರಿ ನಿಯಮಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಸಲು ಅವಕಾಶವನ್ನು ಕಲ್ಪಿಸಲಾಗಿರುವುದಿಲ್ಲ.

ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಕಾಯ್ದೆ, 2018ರಲ್ಲಿ ಕಲಂ 14(3)ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ. Notwithstanding anything to the contrary contained in any law for the time being in force, no person or institution or organization (registered or unregistered) or company or firm or association, Government departments, Corporation or any local or other authority and their agents or employees or any body on their behalf shall,-
Make any construction or carry on any commercial or recreational or industrial activity within thirty meters from the outer boundary of the tanks" ಎಂದಿರುತ್ತದೆ.

ಮತ್ತು ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಕಾಯ್ದೆ, 2018ರಲ್ಲಿ ಕಲಂ 14(6)ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.
"Construct roads, bridges and allied works within tank area including the tank bund. The Authority may grant permission for such works only after ensuring that the original capacity of the tanks is not reduced even after such work" ಎಂದಿರುತ್ತದೆ.

ಕೆರೆ ಮತ್ತು ನಾಲಾಗಳ ಬಫರ್‌ಗಳಲ್ಲಿ ಈ ಹಿಂದೆ ರಸ್ತೆಗಳನ್ನು ಅಭಿವೃದ್ಧಿಸಲು ಅನುಮತಿ ನೀಡಲಾಗುತ್ತಿತ್ತು. ಆದರೆ, ಸರ್ಕಾರದ ಪ್ರಕಟಣೆ ಸಂಖ್ಯೆ: UDD 15 TTP 2015, ದಿನಾಂಕ:21.04.2020ರಲ್ಲಿ ರಸ್ತೆಗಳನ್ನು ಅಭಿವೃದ್ಧಿಸಲು ಅವಕಾಶ ಕಲ್ಪಿಸಲಾಗಿರುವುದಿಲ್ಲ ಹಾಗೂ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಕಾಯ್ದೆ, 2018ರಲ್ಲಿ ಕಲಂ 14(6)ರಲ್ಲಿ ಕೆರೆ ಸಂರಕ್ಷಣಾ ಪ್ರಾಧಿಕಾರದ ಪೂರ್ವಾನುಮೋದನೆ ಪಡೆದು ರಸ್ತೆಗಳನ್ನು ಅಭಿವೃದ್ಧಿಸಲು ಅವಕಾಶ ಕಲ್ಪಿಸಲಾಗಿದೆ.

ಮುಂದುವರೆದು, Town and Country Planning Organization ಸಂಸ್ಥೆಯ River Centric Urban Planning Guidelines ದ Regulations for Eco sensitive Zones and Water Bodies ರ ಕ್ರಮ ಸಂಖ್ಯೆ vi. ರಲ್ಲಿ " Within the demarcated buffers for the valley systems excluding the requirements of buffer as per NGT judgment, the following uses are allowed;

(a) Sewerage treatment plants and water treatment plants
(b) Roads, pathways, formation of drains, culverts, bridges etc which will not obstruct the water course, run offs, channels " ಎಂದು ಉಲ್ಲೇಖಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರದ ಅಧಿಸೂಚನೆ ಸಂಖ್ಯೆ: UDD 15 TTP 2015, ದಿನಾಂಕ:21.04.2020ರಲ್ಲಿ ನದಿ ಮತ್ತು ನೀರಿನ ಮೂಲಗಳ ಬಫರ್‌ಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸದಿರುವ ಬಗ್ಗೆ ಸಭೆಯು ಗಮನಿಸಿತು.

ಆದರೆ, ಬಫರ್ ಪ್ರದೇಶಗಳಲ್ಲಿ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಕಾಯ್ದೆ, 2018ರ ಕಲಂ 14(6)ರಲ್ಲಿ ಪ್ರಾಧಿಕಾರದ ಪೂರ್ವಾನುಮೋದನೆ ಪಡೆದು ರಸ್ತೆ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಿರುವುದರಿಂದ ಹಾಗೂ Town and Country Planning Organization ಸಂಸ್ಥೆಯ River Centric Urban Planning Guidelines ನ Regulations for Eco sensitive Zones and Water Bodies ಜಾಗದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ ಎಂದು ತಿಳಿಸಿರುವುದರಿಂದ, ಬಫರ್ ಪ್ರದೇಶಗಳಲ್ಲಿ ಈ ಹಿಂದಿನಂತೆ ರಸ್ತೆಗಳನ್ನು ಅಭಿವೃದ್ಧಿಸಲು ಅವಕಾಶ ಕಲ್ಪಿಸುವ ಬಗ್ಗೆ ಸರ್ಕಾರದ ಸೂಕ್ತ ಮಾರ್ಗದರ್ಶನ ಕೋರಲು ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

7) **ಪ್ರಾಧಿಕಾರದಲ್ಲಿ ಅನುಮೋದಿತ ವಿನ್ಯಾಸಗಳಲ್ಲಿನ ನಿವೇಶನಗಳನ್ನು ಸಮಾಮೇಲನಾ ಅಥವಾ ವಿಭಜನೆ ಮಾಡುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದ ವಲಯ ನಿಯಮಗಳಲ್ಲಿ ಸಮಾಮೇಲನ (Amalgamation) ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದರಿಂದ, ಪ್ರಸ್ತಾವನೆಯನ್ನು ದಿನಾಂಕ:20.01.2020ರಂದು ಜರುಗಿದ ಪ್ರಾಧಿಕಾರದ 64ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: IX(2) ರಲ್ಲಿ ಮಂಡಿಸಿ, ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

